ಮನಸ್ಸಿನ ಸ್ಥಿತಿಗಳು

ರಚನೆ:

ಬ್ರಹ್ಮವಿದ್ವರಿಷ್ಠ

ತಟವರ್ತಿ ರಾಜ್ಯಲಕ್ಷ್ಮಿ

ಎಲ್ಲರೂ PMC ಕನ್ನಡ ಚಾನೆಲ್‌ಗೆ ಚಂದಾದಾರರಾಗಿ

PMC ಕನ್ನಡ

ಪ್ರತಿ ಕ್ಷಣ... ಸತ್ಯ ದರ್ಶನ

ನಿಯಮಿತವಾಗಿ PMC ಕನ್ನಡ ನೇರಪ್ರಸಾರದ ನವೀಕರಣಗಳು (Updates) ಮತ್ತು PSSM ಕರ್ನಾಟಕ ನವೀಕರಣಗಳನ್ನು (Updates) ಪಡೆಯಲು ದಯವಿಟ್ಟು ನಿಮ್ಮ ಹೆಸರು, ನಗರದ ಹೆಸರು, ಇಮೇಲ್ ಐಡಿಯನ್ನು PMC ಕನ್ನಡ WhatsApp No : 72047 46836 ಸಂಖ್ಯೆಗೆ ಕಳುಹಿಸಿ.

ಮನಸ್ಸಿನ ಸ್ಥಿತಿಗಳು

ರಚನೆ: ಬ್ರಹ್ಮವಿದ್ವರಿಷ್ಠ ತಟವರ್ತಿ ರಾಜ್ಯಲಕ್ಷ್ಮಿ

ಕನ್ನಡಕ್ಕೆ ಅನುವಾದ: ಕೆ. ಶೋಭಾಲತ ಮಲ್ಲಿಕಾರ್ಜುನ

ಪ್ರತಿಗಳು ದೊರೆಯುವ ಸ್ಥಳ

ಶ್ರೀರಾಮ ಪಬ್ಲಿಕೇಶನ್ಸ್

ಶ್ರೀ ರಾಮಧಾಮ ಧ್ಯಾನ ಮಂದಿರ

ನಾರಾಯಣಪ್ಪ ಗಾರ್ಡನ್, ವೈಟ್‌ಫೀಲ್ಡ್ ಬೆಂಗಳೂರು– 560 066

ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್

ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

MANASINA STITHIGALU
Edited & Published by Sriram Publications,
Sri Ramadhama Dhyana Mandira
Narayanappa Garden, Whitefield,
Bangalore - 560066, M.: 9449695503, 8050082689

ಮೊದಲನೆಯ ಮುದ್ರಣ	:	2026
ಹಕ್ಕುಗಳು	:	ಪ್ರಕಾಶಕರು
ಪ್ರಕಾಶಕರು	:	ಶ್ರೀರಾಮ ಪಬ್ಲಿಕೇಶನ್ಸ್ ಶ್ರೀರಾಮಧಾಮ ಧ್ಯಾನ ಮಂದಿರ ನಾರಾಯಣಪ್ಪ ಗಾರ್ಡನ್ ವೈಟ್ ಫೀಲ್ಡ್ ಬೆಂಗಳೂರು–560066 ಮೊ: 9449695503
ಪ್ರತಿಗಳು	:	500
ಬೆಲೆ	:	ರೂ. 40
ಪುಟಗಳು	:	32

"ಉತ್ತಮ ಶಿಷ್ಯನು ಹತ್ತಿಯಂತವನು, ಗುರುವು ಹೇಳಿದ್ದನ್ನು ತಕ್ಷಣವೇ ಗ್ರಹಿಸುತ್ತಾನೆ. ಮಧ್ಯಮ ಶಿಷ್ಯನು ಒಣಕಟ್ಟಿಗೆಯಂತಹವನು ಗುರುವು ಹೇಳಿದ್ದನ್ನು ಸಾಧನೆಯಿಂದ ತಿಳಿದುಕೊಳ್ಳುತ್ತಾನೆ, ಆಧಮ ಶಿಷ್ಯನು ಹಸಿ ಕಟ್ಟಿಗೆಯಂತಹವನು ಗುರುವು ಹೇಳಿದ್ದನ್ನು ಅಷ್ಟು ಬೇಗ ನಂಬುವುದಿಲ್ಲ."

– "ಬ್ರಹ್ಮ ವಿದ್ವರಿಷ್ಠ" ತಟವರ್ತಿ ರಾಜ್ಯಲಕ್ಷ್ಮಿ

ಸ್ವ ಪರಿಚಯ

ನನ್ನ ಹೆಸರು ಎಚ್.ಎನ್. ಶ್ರೀನಿವಾಸ ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990 ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999 ರಲ್ಲಿ ಎಸ್ ಎಸ್ ವೈ ಅಂದರೆ ಸಿದ್ಧ ಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004 ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್ ಫೀಲ್ಡ್ ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎಂ. ವಿಜಯಲಕ್ಷ್ಮಿ ಸೇರಿ 2008 ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ "ಶ್ರೀರಾಮ ಧಾಮ ಧ್ಯಾನ ಮಂದಿರ" ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು ಅದನ್ನು ಸಿದ್ಧ ಸಮಾಧಿ ಯೋಗ ಸಂಸ್ಥಾಪಕರಾದ ಡಾ. ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಪಿತಾಮಹ ಡಾ. ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮ ಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ "ಅನಾಪಾನಸತಿ ಧ್ಯಾನ" ವಿಧಾನವನ್ನು ಪರಿಚಯ ಮಾಡಿಸಿದರು.

ಪತ್ರೀಜಿಯವರನ್ನು ಭೇಟಿಯಾದ ನಂತರ ದಿನನಿತ್ಯದ ನಮ್ಮ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವ ಸಿದ್ಧಾಂತದಲ್ಲಿ ಗುರು ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. ಯಾರೂ ಶಾಶ್ವತವಾಗಿ ಗುರುಗಳಲ್ಲ. ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ. ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ ಎಂದಿಗೂ ಶಿಷ್ಯರಾಗಿಯೇ ಇರಬೇಡಿ ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013 ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದಾವಕಾಶವನ್ನು ಒದಗಿಸಿದರು. ಇದರಲ್ಲಿ ನನಗೆ ನಿತ್ಯ ಅನ್ನದಾನ ಸೇವೆಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ ಆಸಕ್ತಿಯಿಂದ ಧ್ಯಾನ ಅಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ ಸಸ್ಯಾಹಾರ, ಸ್ವಾಧ್ಯಾಯ, ಸಜ್ಜನ ಸಾಂಗತ್ಯ ಅಂದರೆ ಸತ್ಸಂಗ ಹಾಗೂ ಪಿರಮಿಡ್ ಶಕ್ತಿ ಬಳಕೆ ಅವಶ್ಯಕ ಎಂದು ಆಧ್ಯಾತ್ಮ ಶಾಸ್ತ್ರ ತಿಳಿಸುತ್ತದೆ. ನಿರಂತರ ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ ವಿಕಾಸ ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು.

ಹೊಸಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ "ಶ್ರೀರಾಮ ಪಬ್ಲಿಕೇಷನ್" ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರ ರಾಘವರಾವ್ ಅವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರು ಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡಕ್ಕೆ ಆಧ್ಯಾತ್ಮ ಸಾಧಕರಿಗೂ ದೊರೆಯಬೇಕು ಎಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು...

– ಎಚ್.ಎನ್. ಶ್ರೀನಿವಾಸ ಮತ್ತು ಎಸ್.ಎನ್. ವಿಜಯಲಕ್ಷ್ಮಿ

ಸಂಸ್ಥಾಪಕರು ಶ್ರೀರಾಮಧಾಮ ಧ್ಯಾನ ಮಂದಿರ

ಮನಸ್ಸಿನ ಸ್ಥಿತಿಗಳು

ಮಾನವರು ಪ್ರತಿದಿನ ಎಷ್ಟೋ ವಿಷಯಗಳನ್ನು ತಿಳಿದುಕೊಳ್ಳುತ್ತಿರುತ್ತಾರೆ. ಹಾಗೆ ತಿಳಿದುಕೊಂಡವರಲ್ಲಿ ಕೆಲವರು ಏನನ್ನೂ ಮಾಡದೆ ಸುಮ್ಮನಿದ್ದು ಬಿಡುತ್ತಾರೆ, ಕೆಲವರು ತಿಳಿದ ವಿಷಯಗಳನ್ನು ಮರೆತುಬಿಡುತ್ತಾರೆ, ಇನ್ನು ಕೆಲವರು ಆ ವಿಷಯಗಳ ಮೂಲಕ ಎಷ್ಟೋ ಕಲಿಯುತ್ತಾ ಜೀವನದಲ್ಲಿ ಪ್ರಗತಿಯನ್ನು ಸಾಧಿಸುತ್ತಾರೆ.

ಮಾನವರಲ್ಲಿ ಇಂತಹ ವ್ಯತ್ಯಾಸಗಳು ಏಕೆ ಇರುತ್ತವೆ ಎಂದು ನೀವು ಗಮನಿಸಿದರೆ, ಅವರ ಮನಸ್ಸಿನ ಸ್ಥಿತಿಗಳನ್ನು ಅವಲಂಬಿಸಿ ಅವರ ವರ್ತನೆ ಮತ್ತು ಅವರು ಪಡೆಯುವ ಜ್ಞಾನವು ಆಧಾರಪಟ್ಟಿರುತ್ತದೆ ಎಂದು ತಿಳಿಯುತ್ತದೆ.

ಈ ಸೃಷ್ಟಿಯಲ್ಲಿ 84 ಲಕ್ಷ ರೀತಿಯ ಜೀವಿಗಳಾಗಿ ಜನ್ಮ ಪಡೆದು ಕೊನೆಗೆ ಮಾನವ ಜನ್ಮಕ್ಕೆ ಬರುವುದು ನಡೆಯುತ್ತದೆ. ಹಾಗೆ ಮಾನವ ಜನ್ಮವನ್ನು ಪಡೆದ ಮನುಷ್ಯನು ತನ್ನ ಜೀವನದ ಗುರಿ ಏನು? ತನ್ನ ಗಮ್ಯವೇನು? ಎಂದು ತಿಳಿದುಕೊಳ್ಳಲು ಪ್ರಯತ್ನಿಸಬೇಕು.

ಆದರೆ ಈ ಕಲಿಯುಗದಲ್ಲಿ ಬಹಳಷ್ಟು ಜನರು ಬದುಕಿರುವಷ್ಟು ಕಾಲ ಕೇವಲ ಮೋಜು-ಮಸ್ತಿ ಮಾಡುವುದೇ ಜೀವನ ಎನ್ನುವಂತೆ ಬದುಕುತ್ತಿದ್ದಾರೆ. ಆದರೆ ಪತ್ರೀಜಿಯವರಂತಹ ಗುರುಗಳು ನಿಮ್ಮ ಜೀವನಕ್ಕೆ ಬಂದಾಗ ನಿಮ್ಮ ಗಮ್ಯವೇನು? ನಿಮ್ಮ ಗುರಿ ಏನು? ಸತ್ಯವೆಂದರೇನು? ಧರ್ಮವನ್ನು ಹೇಗೆ ಆಚರಿಸಬೇಕು? ಜ್ಞಾನವನ್ನು ಹೇಗೆ ಪಡೆಯಬೇಕು? ಮೋಕ್ಷವನ್ನು ಪಡೆಯುವ ಮಾರ್ಗ ಯಾವುದು? ಎಂಬುವುಗಳನ್ನು ತಿಳಿದುಕೊಳ್ಳುತ್ತೀರಿ. ಜೀವನದ ಗುರಿ ಮತ್ತು ಗಮ್ಯವನ್ನು ಕೂಡ ತಿಳಿದುಕೊಳ್ಳುತ್ತೀರಿ.

ಮಾನವನ ಪ್ರಗತಿಯು ಮನಸ್ಸಿನ ಮೇಲೆ ಆಧಾರಿತವಾಗಿರುತ್ತದೆ. ಮನಸ್ಸು ಪ್ರಪಂಚದ ಕಡೆಗೆ ತಿರುಗಿದರೆ ಪ್ರಗತಿಯು ನಿಧಾನವಾಗಿರುತ್ತದೆ. ಮನಸ್ಸು ಆತ್ಮದ ಕಡೆಗೆ ತಿರುಗಿದರೆ ಪ್ರಗತಿಯು ಹೆಚ್ಚಾಗಿರುತ್ತದೆ.

ಆದುದರಿಂದ ಮನಸ್ಸಿನ ಬಗ್ಗೆ ತಿಳಿದುಕೊಳ್ಳೋಣ. ಮಾನವನ ಮನಸ್ಸು 'ಪಂಚಾವಸ್ಥೆಗಳಲ್ಲಿ' (ಐದು ಸ್ಥಿತಿಗಳಲ್ಲಿ) ಇರುತ್ತದೆ. ಅವುಗಳೆಂದರೆ:

1) ಸ್ಮೃತಿ
2) ಮತಿ
3) ಬುದ್ಧಿ
4) ಪ್ರಜ್ಞೆ
5) ಪ್ರತಿಭೆ

ಮಾನವನ ಮನಸ್ಸು ಈ ಐದು ವಿಧಗಳಲ್ಲಿ ಕೆಲಸ ಮಾಡುತ್ತದೆ.

1) ಸ್ಮೃತಿ: ನೀವು ತಿಳಿದುಕೊಂಡ ಪ್ರತಿಯೊಂದು ವಿಷಯವನ್ನು ನೆನಪಿಸಿಕೊಳ್ಳುವುದನ್ನೇ ಸ್ಮೃತಿ ಎನ್ನುತ್ತಾರೆ. ವಿಷಯಗಳನ್ನು ಸಂಗ್ರಹಿಸುವುದು ಮನಸ್ಸೇ, ನೆನಪಿಟ್ಟುಕೊಳ್ಳುವುದು ಮನಸ್ಸೇ; ಆ ನೆನಪಿಟ್ಟುಕೊಳ್ಳುವ ಸ್ಥಿತಿಯನ್ನೇ ಸ್ಮೃತಿ ಎನ್ನಲಾಗುತ್ತದೆ.

ನೀವು ಗಮನಿಸಿದರೆ, ಬಾಲ್ಯದಲ್ಲಿ ನಡೆದ ವಿಷಯಗಳು, ಕಲಿತ ಸಂಗತಿಗಳು, ಕಂಠಪಾಠ ಮಾಡಿದ ಪದ್ಯಗಳು ಮತ್ತು ಮಗ್ಗಿಗಳು ಚೆನ್ನಾಗಿ ನೆನಪಿರುತ್ತವೆ. ಏಕೆಂದರೆ ಆಗ ನಿಮ್ಮ ಮನಸ್ಸು ಬಾಹ್ಯ ವಿಷಯಗಳ ಮೇಲೆ ಇರುವುದಿಲ್ಲ. ಯಾರ ಬಗ್ಗೆಯೂ ಆಲೋಚಿಸುವುದಿಲ್ಲ, ಆದ್ದರಿಂದ ಮನಸ್ಸಿಗೆ ಏಕಾಗ್ರತೆ ಹೆಚ್ಚಾಗಿರುತ್ತದೆ. ಸ್ಮೃತಿಯಿಂದಲೇ ಸ್ಮೃಹೆ (ಅರಿವು) ಮತ್ತು ಎಚ್ಚರವುಂಟಾಗುತ್ತದೆ.

ಬಾಹ್ಯ ವಿಷಯಗಳ ಬಗ್ಗೆ ಚಿಂತೆಯಿಲ್ಲದೆ ಆಧ್ಯಾತ್ಮಿಕ ಪುಸ್ತಕಗಳನ್ನು ಓದಿದರೂ, ಕೇಳಿದರೂ ಅಥವಾ ಗುರುಗಳ ಮೂಲಕ ಆಧ್ಯಾತ್ಮಿಕ ವಿಷಯಗಳನ್ನು ತಿಳಿದುಕೊಂಡರೂ ಅವು ನಿಮ್ಮ ಸ್ಮೃತಿಯಲ್ಲಿ ಉಳಿಯುತ್ತವೆ. ಆದರೆ ನಿಮ್ಮ ಸುತ್ತಮುತ್ತ ನಾಲ್ಕು ಜನರಿದ್ದಾಗ ನೀವು ಪುಸ್ತಕ ಓದಿದರೂ, ನಿಮ್ಮ ದೃಷ್ಟಿ ಪಕ್ಕದವರ ಮೇಲಿರುತ್ತದೆಯೇ ಹೊರತು ನೀವು ಓದುವ ವಿಷಯದ ಮೇಲಿರುವುದಿಲ್ಲ. ಅದಕ್ಕಾಗಿಯೇ ಅವು ನಿಮ್ಮ ಸ್ಮೃತಿಯಲ್ಲಿ ಉಳಿಯುವುದಿಲ್ಲ ಮತ್ತು ಅಷ್ಟಾಗಿ ನೆನಪಿರುವುದಿಲ್ಲ.

ಅಂದರೆ, ನೀವು ಏಕಾಗ್ರತೆಯಿಂದ ಓದಿದ ವಿಷಯಗಳು ಮಾತ್ರ ನಿಮ್ಮ ಸ್ಮೃತಿಯಲ್ಲಿ ಉಳಿಯುತ್ತವೆ, ಅಂದರೆ ನೆನಪಿನಲ್ಲಿ ಉಳಿಯುತ್ತವೆ. ಅದಕ್ಕಾಗಿಯೇ ಗುರುಗಳು ಹೇಳುವ ವಿಷಯಗಳನ್ನು ಏಕಾಗ್ರತೆಯಿಂದ ಕೇಳಬೇಕು; ಆಗ ಅವು ಯಥಾವತ್ತಾಗಿ ನಿಮ್ಮೊಳಗೆ ಹೋಗಿ ಸ್ಮೃತಿಯಲ್ಲಿ ನೆಲೆಸುತ್ತವೆ.

2) ಮತಿ: ಮತಿ ಎಂದರೆ ಮುಂದೆ ನಡೆಯಲಿರುವ ವಿಷಯಗಳ ಬಗ್ಗೆ ಊಹಿಸುವುದು ಮತ್ತು ನಡೆಯಲಿರುವ ವಿಷಯಗಳ ಬಗ್ಗೆ ಆಲೋಚಿಸುವುದು.

ಯಾರಾದರೂ ಭವಿಷ್ಯದಲ್ಲಿ ನಡೆಯಲಿರುವ ವಿಷಯಗಳ ಬಗ್ಗೆ ಅಥವಾ ಯಾರಾದರೂ ಒಂದು ವಿಷಯದ ಬಗ್ಗೆ ಮಾತನಾಡುತ್ತಿರುವಾಗ, ನೀವು ಅವರೊಂದಿಗೆ ಬೇರೆ ವಿಷಯದ ಬಗ್ಗೆ ಮಾತನಾಡಿದರೆ, ನೀವು ಅವರ ಮಾತುಗಳ ಮೇಲೆ ಗಮನಹರಿಸುತ್ತಿಲ್ಲ ಎಂದರ್ಥ. ಆಗ ಅವರು, "ನಿನಗೆ ಬುದ್ಧಿ ಇಲ್ವಾ? ನಾನು ಏನು ಮಾತನಾಡಿದೆ? ನೀನು ಏನು ಮಾತನಾಡುತ್ತಿದ್ದೀಯಾ?" ಎಂದು ಕೇಳುತ್ತಾರೆ. ಅಂದರೆ ಆಗ ನಿಮ್ಮ ಮನಸ್ಸು ವರ್ತಮಾನದಲ್ಲಿ ಇಲ್ಲ ಎಂದು ಅರ್ಥ. ಹಾಗೆಯೇ, ಎಂದೋ ನಡೆದ ಘಟನೆಗಳನ್ನು ನೆನಪಿಸಿಕೊಂಡು ಸಂಕಟಪಡುವುದು ಅಥವಾ ಮುಂದೆ ನಡೆಯಲಿರುವ ವಿಷಯಗಳ ಬಗ್ಗೆ ಯೋಚಿಸಿ ಭಯಪಡುವುದು ಇಂತಹ ಮಾನಸಿಕ ಸ್ಥಿತಿಯಲ್ಲಿ ನೀವು ಇರುತ್ತೀರಿ.

ಈ ಆಧ್ಯಾತ್ಮಿಕ ಮಾರ್ಗಕ್ಕೆ ಬಂದಿರುವ ನೀವು ವರ್ತಮಾನದಲ್ಲಿಯೇ ಜೀವಿಸಬೇಕು.

ವರ್ತಮಾನದಲ್ಲಿ ನೀವು ಸರಿಯಾಗಿದ್ದರೆ ನಿಮ್ಮ ಭವಿಷ್ಯವು ಯಾವಾಗಲೂ ಚೆನ್ನಾಗಿರುತ್ತದೆ ಎಂದು ಸದ್ಗುರುಗಳು ಹೇಳುತ್ತಾರೆ.

ಅದಕ್ಕಾಗಿಯೇ ಕಳೆದುಹೋದ ವಿಷಯಗಳ ಬಗ್ಗೆ ಯೋಚಿಸಬೇಡಿ, ನಡೆಯಲಿರುವ ವಿಷಯಗಳ ಬಗ್ಗೆ ಊಹೆಗಳನ್ನು ಮಾಡಬೇಡಿ. ವರ್ತಮಾನದಲ್ಲಿ ಬದುಕಬಲ್ಲ ಮಾನಸಿಕ ಸ್ಥಿತಿಯನ್ನು ಬೆಳೆಸಿಕೊಳ್ಳಿ. ಆಗ ನಿಮ್ಮ ಮನಸ್ಸು ಸರಿಯಾಗಿರುತ್ತದೆ ಮತ್ತು ನೀವು ವರ್ತಮಾನದಲ್ಲಿಯೇ ಜೀವಿಸುತ್ತೀರಿ.

ಹಾಗೆ ವರ್ತಮಾನದಲ್ಲಿ ಜೀವಿಸಬೇಕೆಂದರೆ ಪತ್ರೀಜಿಯವರು ಬೋಧಿಸಿದ "ಶ್ವಾಸದ ಮೇಲೆ ಗಮನ" (ಅನಾಪಾನಸತಿ) ಧ್ಯಾನವನ್ನು ತೀವ್ರವಾಗಿ ಮಾಡಬೇಕು.

3) ಬುದ್ಧಿ: ನಿಮ್ಮ ಜೀವನದಲ್ಲಿ ನಡೆಯುವ ಪ್ರತಿಯೊಂದು ವಿಷಯವನ್ನು ಚೆನ್ನಾಗಿ ಯೋಚಿಸಿ ನಿರ್ಧಾರ ತೆಗೆದುಕೊಳ್ಳುವುದೇ ಬುದ್ಧಿ. ವರ್ತಮಾನದಲ್ಲಿ ನಡೆಯುವ ಪ್ರತಿಯೊಂದು ವಿಷಯದಲ್ಲಿ ಸರಿಯಾದ ನಿರ್ಧಾರ ತೆಗೆದುಕೊಳ್ಳುವುದೇ ಬುದ್ಧಿ.

ಉದ್ವೇಗ ಇರುವವರಿಗೆ, ಅಹಂಕಾರಿಗಳಿಗೆ ಮತ್ತು ಅಜ್ಞಾನದಲ್ಲಿ ಇರುವವರಿಗೆ ಬುದ್ಧಿ ಸರಿಯಾಗಿ ಕೆಲಸ ಮಾಡುವುದಿಲ್ಲ. ಸ್ವಲ್ಪ ಸಾವಧಾನವಾಗಿ ಯೋಚಿಸುತ್ತಾ, ಸ್ವಲ್ಪ ಜ್ಞಾನದೊಂದಿಗೆ ಇರುವಾಗ ಪೂರ್ವ ಜನ್ಮದ ವಾಸನೆಗಳು, ಕರ್ಮಗಳು ಮತ್ತು ಸಂಸ್ಕಾರಗಳು ಉತ್ತಮವಾಗಿದ್ದಾಗ ನಿಮ್ಮ ಬುದ್ಧಿಯು ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ. ಅಷ್ಟೇ ಅಲ್ಲ, ಬುದ್ಧಿಯು ಸರಿಯಾಗಿ ಕೆಲಸ ಮಾಡಿದರೆ ಲೋಕಕಲ್ಯಾಣಕಾರಿ ಕೆಲಸಗಳನ್ನು ಮಾಡುತ್ತಾರೆ. ಅದೇ ರೀತಿ ಪ್ರಾಣಿ ಪಕ್ಷಿಗಳಿಗೂ ಬುದ್ಧಿ ಇರುತ್ತದೆ, ಆದರೆ ಅವು ಬುದ್ಧಿಯನ್ನು ಹೆಚ್ಚಾಗಿ ಬಳಸುವುದಿಲ್ಲ. ಅವು ಆಹಾರ ಸಂಪಾದನೆಗಾಗಿ ಮತ್ತು ಯಾವುದಾದರೂ ಆಪತ್ತುಗಳು ಪ್ರಮಾದಗಳು ಸಂಭವಿಸಿದಾಗ ಮಾತ್ರ ಬುದ್ಧಿಯನ್ನು ಬಳಸುತ್ತವೆ. ಅವು ಕನಿಷ್ಠ ಮಟ್ಟದ ಬುದ್ಧಿ ಸ್ಥಿತಿಯಲ್ಲಿ ಇರುವುದರಿಂದ ಈ ಎರಡು ವಿಷಯಗಳಿಗಷ್ಟೇ ಬುದ್ಧಿಯನ್ನು ಸೀಮಿತಗೊಳಿಸುತ್ತವೆ.

ಆದರೆ ಮನುಷ್ಯನು ಪೂರ್ಣ ಮಟ್ಟದ ಬುದ್ಧಿಯನ್ನು ಹೊಂದಿರುತ್ತಾನೆ. ಆದರೆ ಅದನ್ನು ಪೂರ್ಣವಾಗಿ ಬಳಸುವುದಿಲ್ಲ. ಇದಕ್ಕೆ ಕಾರಣ ನಾವು ಸೇವಿಸುವ ಆಹಾರ ಮತ್ತು ಮಾಡುವ ವ್ಯವಹಾರ. ಅದಕ್ಕಾಗಿಯೇ ತಪ್ಪು ಕೆಲಸಗಳನ್ನು ಮಾಡಿದಾಗ ಅಥವಾ ತಪ್ಪು ನಿರ್ಧಾರಗಳನ್ನು ತೆಗೆದುಕೊಂಡಾಗ "ನಿನಗೆ ಬುದ್ಧಿ ಇಲ್ವಾ?" ಎಂದು ಬೈಯುತ್ತಾರೆ.

ನೀವು ಗಮನಿಸಿದರೆ, ಕೆಲವರು ಎದುರಿಗಿರುವ ವ್ಯಕ್ತಿ ಎಂತಹವನೆಂದು ತಿಳಿಯದೆ ತರಾತುರಿಯಲ್ಲಿ ದೂರುಗಳನ್ನು (ಆರೋಪಗಳನ್ನು) ಮಾಡುತ್ತಾರೆ. ಆಮೇಲೆ ಆ ವ್ಯಕ್ತಿಯ ಬಗ್ಗೆ ತಿಳಿದುಕೊಂಡು "ನನ್ನ ಬುದ್ಧಿ ಕಡಿಮೆಯಾಗಿ ಹಾಗೆ ನಡೆದುಕೊಂಡೆ, ನನ್ನನ್ನು ಕ್ಷಮಿಸು" ಎಂದು ಹೇಳುತ್ತಾರೆ.

ನಿಮ್ಮ ಕರ್ಮಗಳು ಉತ್ತಮವಾಗಿದ್ದಾಗ ಲೋಕಕಲ್ಯಾಣಕಾರಿ ಕೆಲಸಗಳನ್ನು ಮಾಡುತ್ತೀರಿ, ಬೇರೆಯವರ ಮೇಲೆ ಸುಳ್ಳು ಆರೋಪಗಳನ್ನು ಮಾಡುವುದಿಲ್ಲ; ಅಂತಹ ಸಮಯದಲ್ಲಿ ನಿಮ್ಮ ಬುದ್ಧಿ ಸರಿಯಾಗಿ ಕೆಲಸ ಮಾಡುತ್ತಿರುತ್ತದೆ.

ಇಂತಹವರು "ಬೇರೆಯವರು ನನಗೆ ಸಹಾಯ ಮಾಡುತ್ತಾರಾ ಇಲ್ಲವೇ?" ಎಂದು ಯೋಚಿಸುವುದಿಲ್ಲ. ಅವರ ಬುದ್ಧಿಯು ಯಾವಾಗಲೂ ಬೇರೆಯವರನ್ನು ಉದ್ಧರಿಸಬೇಕು (ಒಳ್ಳೆಯದು ಮಾಡಬೇಕು) ಎಂದೇ ಇರುತ್ತದೆ. ಅಂತಹವರು ಮಾಡುವ ಕೆಲಸಗಳಿಗೆ ಪ್ರಕೃತಿಯ ಸಹಕಾರ ಕೂಡ ಇರುತ್ತದೆ.

ನೀವು ಒಳ್ಳೆಯ ಕೆಲಸಗಳನ್ನು ಮಾಡಿದಾಗ ನಿಮ್ಮ ಬುದ್ಧಿಯು ಸದ್ಬುದ್ಧಿಯಾಗುತ್ತದೆ. ಎದುರಿಗಿರುವವರಿಗೆ ಹಿಂಸೆ ನೀಡುವ ಅಥವಾ ಕಷ್ಟ ಕೊಡುವ ಕೆಲಸಗಳನ್ನು ಮಾಡಿದರೆ ನಿಮ್ಮ ಬುದ್ಧಿಯು ದುರ್ಬುದ್ಧಿ ಏಕೆಂದರೆ ಇತರರನ್ನು ಹಿಂಸಿಸುವವರು ರಾಕ್ಷಸರು, ಇತರರಿಗೆ ಒಳಿತನ್ನು ಮಾಡುವವರು ದೇವತೆಗಳು. "ದೇವತೆಗಳ ಬುದ್ಧಿ ಸದ್ಬುದ್ಧಿ, ರಾಕ್ಷಸರ ಬುದ್ಧಿ ದುಷ್ಟಬುದ್ಧಿ". ಇಬ್ಬರಿಗೂ ಬುದ್ಧಿ ಇರುತ್ತದೆ, ಆದರೆ ಅದನ್ನು ಬಳಸುವ ವಿಧಾನದ ಮೇಲೆ ಅದು ಸದ್ಬುದ್ಧಿಯೇ ಅಥವಾ ದುಷ್ಟಬುದ್ಧಿಯೇ ಎಂಬುದು ತಿಳಿಯುತ್ತದೆ.

4) ಪ್ರಜ್ಞೆ: ನಿಮ್ಮ ಜೀವನಕ್ಕೆ ಒಬ್ಬ ಸದ್ಗುರುಗಳು ಬಂದು, ಆ ಭಗವಂತ ಯಾರು? ಆತನನ್ನು ಹೇಗೆ ತಿಳಿದುಕೊಳ್ಳಬೇಕು? ಎಂಬ ವಿಷಯಗಳನ್ನು ಬೋಧಿಸಿದಾಗ, ಬಾಹ್ಯವಾಗಿ ಅಲೆಯುತ್ತಿದ್ದ ನಿಮ್ಮ ಮನಸ್ಸು ಅಂತರ್ಮುಖಿಯಾಗುತ್ತದೆ.

ನಿಮ್ಮ ಮನಸ್ಸು ಯಾವಾಗಲೂ ಬಾಹ್ಯ ವಿಷಯಗಳ ಸಂಗ್ರಹಣೆಯಲ್ಲಿರುತ್ತದೆ. ಈ ಬಾಹ್ಯ ವಿಷಯಗಳ ಸಂಗ್ರಹಣೆಯಿಂದಾಗಿ ಹೆಚ್ಚಾಗಿ ಆತಂಕಗಳು, ಆವೇಶಗಳು, ಅಶಾಂತಿ, ಅಹಂಕಾರ ಮತ್ತು ಅಜ್ಞಾನ ಉಂಟಾಗುತ್ತವೆ. ಅದೇ ಅಂತರ್ಮುಖಿಯಾದ ಮನಸ್ಸು ಶಾಂತವಾಗಿ, ಸ್ಥಿರವಾಗಿ ಮತ್ತು ನಿಧಾನವಾಗಿ ಆಲೋಚಿಸುತ್ತಿರುತ್ತದೆ.

ಅದಕ್ಕಾಗಿಯೇ ಈಗ ವೈದ್ಯರು ಕೂಡ ಒತ್ತಡ ಮತ್ತು ಖಿನ್ನತೆಯಲ್ಲಿ (Depression) ಇರುವವರಿಗೆ ಧ್ಯಾನ ಮಾಡಲು ಹೇಳುತ್ತಿದ್ದಾರೆ. ಎಷ್ಟು ಔಷಧಿಗಳನ್ನು ಬಳಸಿದರೂ ಮನುಷ್ಯನಿಗೆ ಶಾಂತಿ ಸಿಗುವುದಿಲ್ಲ, ಧ್ಯಾನ ಮಾಡಿದರೆ ಮಾತ್ರ ಮನಸ್ಸಿಗೆ ಶಾಂತಿ ಲಭಿಸುತ್ತದೆ. ಆ ಸೃಷ್ಟಿಕರ್ತನಿಗೆ ಧ್ಯಾನವನ್ನು ಯಾವಾಗ ನೀಡಬೇಕೆಂದು ಗೊತ್ತು. ಅದಕ್ಕಾಗಿಯೇ ಯಾವಾಗಲೋ ದ್ವಾಪರಯುಗದಲ್ಲಿ ಸಂಪೂರ್ಣವಾಗಿ ಮರೆಯಾಗಿದ್ದ ಧ್ಯಾನವನ್ನು, ಈಗ ಮತ್ತೆ ಕಲಿಯುಗದಲ್ಲಿ ಪತ್ರೀಜಿಯವರು ಬಂದ ನಂತರ ಮನುಷ್ಯರು ಮಾಡುತ್ತಿದ್ದಾರೆ. ಪತ್ರೀಜಿಯವರಿಂದ ಧ್ಯಾನದ ವಿಶಿಷ್ಟತೆ ಮತ್ತು ಅವಶ್ಯಕತೆಯನ್ನು ತಿಳಿದುಕೊಂಡು, ಧ್ಯಾನ ಮಾಡುತ್ತಾ ಮನಸ್ಸಿನ ಆತಂಕಗಳು, ಆವೇಶಗಳು ಮತ್ತು ಅಹಂಕಾರಗಳನ್ನು ಕಡಿಮೆ ಮಾಡಿಕೊಳ್ಳುತ್ತಿದ್ದಾರೆ.

ಬಾಹ್ಯವಾಗಿ ನೋಡಿದರೆ ಅಹಂಕಾರ ಬರುತ್ತದೆ, ಅಂತರ್ಯಕ್ಕೆ ಹೋದಾಗ ಆನಂದ ಸಿಗುತ್ತದೆ. ನೋಡಿ, ಈ ಬಾಹ್ಯ ಪ್ರಪಂಚದಲ್ಲಿ ಯಾವುದೇ ಸಣ್ಣ ಅಥವಾ ದೊಡ್ಡ ಕೆಲಸ ಮಾಡಿದರೂ, ದೊಡ್ಡ ವಿದ್ಯೆ ಇದ್ದರೂ, ಸೌಂದರ್ಯವಿದ್ದರೂ, ಸಂಪತ್ತಿದ್ದರೂ, ಪದವಿಗಳಿದ್ದರೂ ಅಹಂಕಾರ ಹೆಚ್ಚಾಗುತ್ತದೆ.

ಪರಮಾತ್ಮನು ಸೃಷ್ಟಿಸಿದ ಸೃಷ್ಟಿಯನ್ನು ನೋಡಿ ನನ್ನದು ಎಂಬ ಮಿಥ್ಯಾ ಜ್ಞಾನದಿಂದ ಜನರು ಅಹಂಕಾರವನ್ನು ಬೆಳೆಸಿಕೊಳ್ಳುತ್ತಾರೆ. ಈ ಸೃಷ್ಟಿಯಲ್ಲಿರುವ ಯಾವುದೂ ನನ್ನದಲ್ಲ, ಎಲ್ಲವೂ ಆ ಭಗವಂತನದೇ ಎಂದು ತಿಳಿದುಕೊಂಡ ಕ್ಷಣದಿಂದ, ನೀವು ಅಂತರಂಗಕ್ಕೆ ಇಳಿದು ನಿಮ್ಮ ಗುರಿ ಏನು? ನಿಮ್ಮ ಉದ್ದೇಶವೇನು? ಈ ಭೂಮಿಯ ಮೇಲೆ ನೀವು ಸಾಧಿಸಬೇಕಾದದ್ದು ಏನು? ಎಂಬ ಸತ್ಯವನ್ನು ಅರಿತುಕೊಳ್ಳುತ್ತೀರಿ.

ಅಷ್ಟೇ ಅಲ್ಲದೆ, ಒಬ್ಬ ಸದ್ಗುರುವನ್ನು ಪಡೆದಾಗ, ಅವರ ಮಾತುಗಳನ್ನು ಆ ಪರಮಾತ್ಮನ ವಾಕ್ಕುಗಳೆಂದು ಸ್ವೀಕರಿಸಿ, ಅವರು ಹೇಳಿದ ಸಾಧನೆಯನ್ನು ಮಾಡಿದಾಗ ನಿಮ್ಮೊಳಗಿನಿಂದ ಪ್ರಜ್ಞೆ (ವಿವೇಕ) ಹೊರಹೊಮ್ಮುತ್ತದೆ.

ಈ ಆಧ್ಯಾತ್ಮಿಕ ಜೀವನಕ್ಕೆ ಪ್ರವೇಶಿಸಿದಾಗಿನಿಂದ ಆತ್ಮದಿಂದ ಸಂಕೇತಗಳು ದೊರೆಯುತ್ತಲೇ ಇರುತ್ತವೆ. ಅದಕ್ಕಾಗಿಯೇ ನಿಮ್ಮ ಜೀವನದಲ್ಲಿ ಗುರುಗಳು ಬರದಿದ್ದರೆ ಸತ್ಯವು ಬೋಧನೆಯಾಗುವುದಿಲ್ಲ. ಸತ್ಯವು ತಿಳಿಯದಿದ್ದರೆ ಧರ್ಮವನ್ನು ಆಚರಿಸಲು ಸಾಧ್ಯವಿಲ್ಲ. ಸತ್ಯ ಮತ್ತು ಧರ್ಮವಿಲ್ಲದಿದ್ದರೆ ಜ್ಞಾನವು ಬೆಳೆಯುವುದಿಲ್ಲ. ಈ ಮೂರೂ ನಿಮ್ಮ ಜೀವನದಲ್ಲಿ ಬಂದಾಗ, ನಿಮ್ಮ ಆತ್ಮದಿಂದ ಪ್ರಜ್ಞೆಯು ಮನಸ್ಸಿಗೆ ತಲುಪುತ್ತದೆ.

ಅದಕ್ಕಾಗಿಯೇ ಈ ಧ್ಯಾನ ಮಾರ್ಗಕ್ಕೆ ಬಂದವರು ಒಂದು ರೀತಿ ಯೋಚಿಸಿದರೆ, ಈ ಪ್ರಪಂಚದಲ್ಲಿರುವ ಉಳಿದವರೆಲ್ಲರೂ ಇನ್ನೊಂದು ರೀತಿ ಯೋಚಿಸುತ್ತಾರೆ. ಪದವಿಗಳನ್ನು ಪಡೆದರೂ, ಡಿಗ್ರಿಗಳನ್ನು ಸಂಪಾದಿಸಿದರೂ, ಹಣ ಬಂದರೂ ಅದೆಲ್ಲವೂ "ನನ್ನ ಕೃಷಿಯಿಂದಲೇ ಬಂದಿದೆ" ಎಂದು ಸಾಮಾನ್ಯರು ಅಂದುಕೊಳ್ಳುತ್ತಾರೆ.

ಆದರೆ ಒಬ್ಬ ಜ್ಞಾನಿಯು ಇದೆಲ್ಲವೂ ಭಗವಂತನಿಂದಲೇ ಬಂದಿದೆ ಎಂದು ಭಾವಿಸುತ್ತಾನೆ. ಅಂದರೆ, ಆ ಭಗವಂತನ ದಯೆಯಿಂದ, ಆತನ ಕೃಪೆಯಿಂದಲೇ ನಾನು ಎಲ್ಲವನ್ನೂ ಪಡೆಯುತ್ತಿದ್ದೇನೆ ಮತ್ತು ನನ್ನ ಹಿಂದೆ ಆ ಪರಮಾತ್ಮನ ಕೃಪೆ ಇದೆ ಎಂದು ನಂಬುತ್ತಾನೆ. ನೀವು ಪ್ರಕೃತಿಗೆ, ಗುರುವಿಗೆ ಮತ್ತು ಪರಮಾತ್ಮನಿಗೆ ಗೌರವ ನೀಡಿದಾಗ ನಿಮ್ಮ ಆತ್ಮದಿಂದ ಪ್ರಜ್ಞೆಯು ಲಭಿಸುತ್ತದೆ. ಆಗ ಮನಸ್ಸು ಅಪಾರ ಜ್ಞಾನದಿಂದ ತುಂಬಿಕೊಳ್ಳುತ್ತದೆ. ಅಂದರೆ ಪ್ರಜ್ಞೆಯಿಂದ ನಿಮಗೆ ಜ್ಞಾನ ದೊರೆಯುತ್ತದೆ ಎಂದು ಅರ್ಥ. ಕೇಳುವುದರಿಂದ (ಶ್ರವಣ) ಮತ್ತು ಓದುವುದರಿಂದ (ಸ್ವಾಧ್ಯಾಯ) ಬರುವ ಜ್ಞಾನವು ಬಹಳ ಅಲ್ಪ, ಆದರೆ ಪೂರ್ಣ ಜ್ಞಾನವನ್ನು ಪ್ರಜ್ಞೆ ಯಿಂದಲೇ ಹೊಂದುತ್ತಾರೆ.

5) ಪ್ರತಿಭೆ: ಪ್ರತಿಭೆಯು ಪ್ರಜ್ಞೆಗಿಂತ ದೊಡ್ಡದು. ಯಾರು ಅತ್ಯಂತ ತೀವ್ರವಾದ ಧ್ಯಾನ ಸಾಧನೆ ಮಾಡುತ್ತಾರೋ, ಅವರ ಮೇಲೆ ಭಗವಂತನ ಕೃಪೆ ಉಂಟಾಗಿ, ಅಂದರೆ ಆ ದೈವಾನುಗ್ರಹದಿಂದ ಪ್ರತಿಭೆ ಸಿದ್ಧಿಸುತ್ತದೆ. ನೀವು ಗಮನಿಸಿದರೆ, ಒಬ್ಬ ಸಾಮಾನ್ಯನಾಗಿದ್ದ ರತ್ನಾಕರನು ಮಹಾತ್ಮನಾದ ವಾಲ್ಮೀಕಿಯಾಗಿ ಬದಲಾಗಿ ರಾಮಾಯಣ ಮಹಾಕಾವ್ಯವನ್ನೇ ಬರೆದರು. ಹಾಗೆಯೇ ಕಾಳಿದಾಸ, ವ್ಯಾಸರು, ಶಂಕರಾಚಾರ್ಯರು, ಮಲಯಾಳ ಸ್ವಾಮಿಯಂತಹ ಮಹನೀಯರೆಲ್ಲರೂ ಸಾಧನೆ ಮಾಡಿ ದೈವಾನುಗ್ರಹದ ಮೂಲಕ ತಮ್ಮಲ್ಲಿರುವ ಪ್ರತಿಭೆಯನ್ನು ಹೊರಹಾಕಿ ಎಷ್ಟೋ ಗ್ರಂಥಗಳನ್ನು, ಶಾಸ್ತ್ರಗಳನ್ನು ನಮಗೆ ನೀಡಿದ್ದಾರೆ ಎಂದರೆ ಅವರಲ್ಲಿ ಎಂತಹ ಪ್ರತಿಭೆ ಮತ್ತು ಎಂತಹ ಮೇಧಾಶಕ್ತಿ ಇದ್ದಿರಬಹುದು? ಒಮ್ಮೆ ಆಲೋಚಿಸಿ. ಅಂದರೆ ಅವರ ಮನಸ್ಸು ಎಷ್ಟೊಂದು ಶುದ್ಧತೆಯನ್ನು ಹೊಂದಿರಬಹುದು ಎಂದು ನಾವು ತಿಳಿದುಕೊಳ್ಳಬಹುದು.

ಪರಮಾತ್ಮನ ಕೃಪೆ ಇರುವವರಿಗೆ ಈ ಪ್ರತಿಭೆ ಹೊರಹೊಮ್ಮುತ್ತದೆ. ರಾಘವರಾವ್ ಅವರು ಇಷ್ಟೊಂದು ಪುಸ್ತಕಗಳನ್ನು ಬರೆಯಲು ಸಾಧ್ಯವಾಯಿತು ಎಂದರೆ, ಮೊದಮೊದಲು ಅವರಲ್ಲಿದ್ದ ಪ್ರಜ್ಞೆಯು ಪತ್ರೀಜಿಯವರ ಪರಿಚಯದ ನಂತರ, ಸಾಧನೆ ಹೆಚ್ಚಾದಂತೆ ಲೋಕ ಕಲ್ಯಾಣಕರವಾದ ಕೆಲಸಗಳನ್ನು ಮಾಡುತ್ತಾ, "ಇನ್ನೂ ಏನು ಮಾಡಬೇಕು? ಈ ಜ್ಞಾನವನ್ನು ಎಲ್ಲರಲ್ಲಿ ಹೇಗೆ ಹೆಚ್ಚಿಸಬೇಕು?" ಎಂದು ನಿರಂತರವಾಗಿ ತಪಿಸುತ್ತಿದ್ದಾರೆ. ಎಲ್ಲರಲ್ಲಿಯೂ 'ಆತ್ಮ' ಎಂಬ ಭಗವಂತನಿದ್ದಾನೆ, ಆ ಆತ್ಮನೆಂಬ ಭಗವಂತನಿಗೆ 'ಧ್ಯಾನ'ವೆಂಬ ನೀರನ್ನು ಎರೆದರೆ ಆ ಶಕ್ತಿ ವೃದ್ಧಿಯಾಗಿ ಆ ಪ್ರಜ್ಞೆಯು ಪ್ರತಿಭೆಯಾಗಿ ಬದಲಾಗುತ್ತದೆ ಎಂದು ತಿಳಿದುಕೊಂಡು ಎಲ್ಲರಿಗೂ ಬೋಧಿಸುತ್ತಿದ್ದಾರೆ. ರಾಘವರಾವ್ ಅವರಲ್ಲಿ ಯಾವಾಗ ಆ ಪ್ರಜ್ಞೆಯು ಪ್ರತಿಭೆಯಾಗಿ ಮಾರ್ಪಟ್ಟಿತೋ, ಆಗಿನಿಂದ ಅವರು ಎಷ್ಟೋ ಪುಸ್ತಕಗಳನ್ನು ಬರೆಯಲು ಶಕ್ತರಾಗಿದ್ದಾರೆ.

ಉದಾಹರಣೆಗೆ ನಾವು ವರ್ತಮಾನದ ಕಲಾವಿದರನ್ನು ತೆಗೆದುಕೊಂಡರೆ ನೃತ್ಯ, ಚಿತ್ರಕಲೆ, ಸಂಗೀತದಂತಹ ಎಷ್ಟೋ ರಂಗಗಳಲ್ಲಿ ವಿವಿಧ ರೀತಿಯ ಕಲಾವಿದರಿರುತ್ತಾರೆ. ಅವರೆಲ್ಲರೂ ಕೂಡ ಕಳೆದ ಜನ್ಮಗಳಲ್ಲಿ ಸ್ವಲ್ಪ ಮಟ್ಟಿಗಾದರೂ ಆ ಕಲೆಯ ಸಾಧನೆಯನ್ನು ಮಾಡಿದವರೇ. ಅದಕ್ಕಾಗಿಯೇ ಅವರು ಈ ಜನ್ಮದಲ್ಲೂ ಕೃಷಿ ಮಾಡಿ ತಮ್ಮಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸಲು ಸಾಧ್ಯವಾಗುತ್ತಿದೆ. ಆದರೆ ಅವರು ಅಷ್ಟಕ್ಕೇ ಸೀಮಿತವಾಗದೆ, ಇನ್ನೂ ಈ ಧ್ಯಾನ ಸಾಧನೆ ಮಾಡಿದರೆ ಒಬ್ಬ ಕಾಳಿದಾಸನಂತೆ, ವಾಲ್ಮೀಕಿಯಂತೆ, ವ್ಯಾಸ ಭಗವಾನರಂತೆ, ಶಂಕರಾಚಾರ್ಯರಂತೆ ಹೀಗೆ ಉನ್ನತವಾಗಿ ಎಷ್ಟೋ ಕಾವ್ಯಗಳನ್ನು ಬರೆದು ಆ ಜ್ಞಾನವನ್ನು ಜನರಿಗೆ ತಲುಪಿಸುತ್ತಾರೆ.

ಅವರು ಸ್ವಲ್ಪ ಮಟ್ಟಿನ ಪ್ರತಿಭೆಯನ್ನು ಪ್ರದರ್ಶಿಸುತ್ತಿದ್ದಾರೆ ಎಂದರೆ ಯಾವುದೋ

ಒಂದು ಕಲೆಯಲ್ಲಿ ಮಿಂಚುತ್ತಿದ್ದಾರೆ ಎಂದು ಅರ್ಥ. ಆದರೆ ಒಬ್ಬ ಶಂಕರಾಚಾರ್ಯರಾಗಲಿ, ಕಾಳಿದಾಸನಾಗಲಿ ಅಥವಾ ವಾಲ್ಮೀಕಿಯಾಗಲಿ ಲೋಕ ಕಲ್ಯಾಣಕ್ಕಾಗಿ ಸೇವೆ ಮಾಡುತ್ತಾ, ಎಷ್ಟೋ ಮಹಾಕಾವ್ಯಗಳ ಮೂಲಕ ಅಪಾರ ಜ್ಞಾನವನ್ನು ಜನರಿಗೆ ನೀಡಿದ್ದಾರೆ; ಅದನ್ನು ಓದಿ ಎಷ್ಟೋ ಜನರು ಜ್ಞಾನವಂತರಾಗಿದ್ದಾರೆ.

ಮತ್ತೆ ಇವರೆಲ್ಲರ ಮೇಲೆ ದೈವದ ಕೃಪೆ ಇದ್ದಿದ್ದರಿಂದಲೇ ಇವರ ಪ್ರತಿಭೆ ಇಷ್ಟು ಮಟ್ಟಿಗೆ ವಿಸ್ತರಿಸಿದೆ. ಈ ಭೂಮಿಯ ಮೇಲಿರುವ ಎಲ್ಲಾ ಜೀವಿಗಳಿಗಿಂತ ಮಾನವನು ಶ್ರೇಷ್ಠನು. ಮನಸ್ಸಿನ ಪ್ರಭಾವದಿಂದ ಬದುಕುವವನು, ಆದರೆ ಆ ಮನಸ್ಸನ್ನು ಪ್ರಾಪಂಚಿಕ ವ್ಯವಹಾರಗಳ ಕಡೆಗೆ ತಿರುಗಿಸಿದರೆ ಸ್ವಾರ್ಥದಿಂದ ಬದುಕುತ್ತಾ, ಸೀಮಿತವಾಗಿ ಕಲಿತು ಮರಣಿಸುತ್ತಾರೆ. ಆದರೆ ಅಂತಹ ಮನಸ್ಸನ್ನು ಸಾಧನೆಯ ಮೂಲಕ ಆತ್ಮದ ಕಡೆಗೆ ತಿರುಗಿಸಿದರೆ, ಬುದ್ಧಿ ವಿಕಸನಗೊಂಡು ಪ್ರಜ್ಞೆ ಪಡೆಯುತ್ತಾ ಜ್ಞಾನವಂತರಾಗುತ್ತಾರೆ.

ನೀವು ಪ್ರಾಪಂಚಿಕ ಜೀವನವನ್ನೇ ಬದುಕುತ್ತಾ, ಆಧ್ಯಾತ್ಮಿಕ ಜೀವನ ಇಲ್ಲದಿದ್ದರೆ ಅರ್ಧ ಜೀವನ ಮಾತ್ರ ಬದುಕಿದಂತೆ; ಪೂರ್ಣ ಪುರುಷರಾಗಲು ಸಾಧ್ಯವಿಲ್ಲ.

ಎಷ್ಟೋ ಜನರು ಭೂಮಿಯ ಮೇಲೆ ಹುಟ್ಟುತ್ತಿದ್ದಾರೆ, ಬೆಳೆಯುತ್ತಿದ್ದಾರೆ, ಅನುಭವಿಸುತ್ತಿದ್ದಾರೆ ಮತ್ತು ಮರಣ ಹೊಂದುತ್ತಿದ್ದಾರೆ. ಆದರೆ ಅವರಾರೂ ಪೂರ್ಣ ಪುರುಷರಾಗಲಾರರು. ಯಾರು ಈ ಪ್ರಪಂಚಕ್ಕೆ ಬಂದು ಪ್ರಾಪಂಚಿಕ ಜೀವನವನ್ನು ಅನುಭವಿಸುತ್ತಾ ಅದರೊಂದಿಗೆ ಆಧ್ಯಾತ್ಮಿಕ ಜೀವನವನ್ನೂ ಅನುಭವಿಸುತ್ತಾರೋ, ಅವರೇ ಪೂರ್ಣ ಪುರುಷರಾಗುತ್ತಾರೆ.

ಪತ್ರೀಜಿಯವರು ಎಷ್ಟೋ ಜನರಿಗೆ ಜ್ಞಾನವನ್ನು ಬೋಧಿಸಿದರು, ಮತ್ತು ಎಲ್ಲರಲ್ಲಿರುವ ಪ್ರತಿಭೆ ಬಯಲಿಗೆ ಬರಬೇಕೆಂದರೆ ಅದು ಅವರವರ ಕೃಷಿಯ ಮೇಲೆ ಅವಲಂಬಿತವಾಗಿರುತ್ತದೆ. ನಾನು ಬೆಳೆಯಬೇಕು ಎನ್ನುವ ಹಂಬಲ ಅವರಲ್ಲಿ ಇರಬೇಕು. ಕೇವಲ ನಾನೊಬ್ಬನೇ ಅಲ್ಲ, ನನ್ನಂತೆಯೇ ಇರುವವರೆಲ್ಲರೂ ಆತ್ಮ ಸ್ವರೂಪಿಗಳೇ, ಆದ್ದರಿಂದ ಎಲ್ಲರನ್ನೂ ಉದ್ಧರಿಸಬೇಕು ಎಂದು ಯಾರಾದರೂ ಮನಃಪೂರ್ವಕವಾಗಿ ಬಯಸಿದರೆ, ಅಂತಹವರಿಗೆ ಪ್ರಕೃತಿಯ ಸಹಕಾರ ದೊರೆಯುತ್ತದೆ.

"ನಾನೇ ಇನ್ನು ಸರಿಯಾಗಿಲ್ಲ, ಇನ್ನು ಪಕ್ಕದವರನ್ನು ಏನು ಸರಿಪಡಿಸಲಿ?" ಎಂದು ಅನೇಕರು ಅಂದುಕೊಳ್ಳುತ್ತಾರೆ. ನೀನು ಸರಿಯಾಗಿದ್ದೀಯಾ? ಇಲ್ಲವಾ? ಎನ್ನುವುದು ಮುಖ್ಯವಲ್ಲ. ನಿನ್ನ ಪಕ್ಕದವನು ಚೆನ್ನಾಗಿದ್ದಾಗ ನೀನು ಇನ್ನೂ ಚೆನ್ನಾಗಿರುತ್ತೀಯಾ. ಸೃಷ್ಟಿಯಲ್ಲಿರುವ ಭಗವಂತನ ಧರ್ಮ, ನಿನಗೆ ದೊರೆತಿದ್ದನ್ನು ಹಂಚುವುದೇ ಆಗಿದೆ.

ಅದಕ್ಕಾಗಿಯೇ ಪತ್ರೀಜಿಯವರು "ಜ್ಞಾನವನ್ನು ನೀನು ಎಷ್ಟು ಕಲಿತಿದ್ದೀಯೋ ಅಷ್ಟನ್ನು ತಿಳಿಸು" ಎಂದಿದ್ದಾರೆ. ಅದಕ್ಕಿಂತ ಹೆಚ್ಚಿಗೆ ಹೇಳು ಎಂದು ಅವರು ಹೇಳಿಲ್ಲ.

ನೀನು ಎಷ್ಟು ಕಲಿತಿದ್ದೀಯೋ, ಎಲ್ಲರೂ ಆತ್ಮ ಸ್ವರೂಪಿಗಳೆಂದು ಅಷ್ಟನ್ನು ಕಲಿಸು. ಯಾವುದೇ ಜೀವಿಯೂ ಆತ್ಮ ಸ್ವರೂಪವಲ್ಲದೆ ಇಲ್ಲ, ಎಲ್ಲವೂ ಆತ್ಮಗಳೇ. ಆದ್ದರಿಂದಲೇ ಯಾವುದೇ ಜೀವಿಯನ್ನು ಕೊಲ್ಲುವ ಹಕ್ಕು ನಿನಗಿಲ್ಲ.

ಈ ಪರಮ ಸತ್ಯವನ್ನು ಹೇಳಲು ಡಿಗ್ರಿಗಳ ಅಗತ್ಯವಿಲ್ಲ, ವರ್ತಮಾನದಲ್ಲಿ ಏನು ನಡೆಯುತ್ತಿದೆಯೋ ಅದನ್ನು ನೀನು ಹೇಳು. ಏಕೆಂದರೆ ಅಜ್ಞಾನದಲ್ಲಿರುವ ಮಾನವನು ಜೀವಹಿಂಸೆ ಮಾಡುತ್ತಿದ್ದಾನೆ. ಆ ಜೀವಿಗಳೆಲ್ಲಾ ನನಗಾಗಿಯೇ ಹುಟ್ಟಿವೆ ಎಂದು ಅಂದುಕೊಳ್ಳುತ್ತಿದ್ದಾನೆ. ಆದರೆ ಯಾವ ಜೀವಿಯೂ ಯಾರಿಗಾಗಿಯೂ ಹುಟ್ಟಿಲ್ಲ. ಪ್ರತಿ ಜೀವಿಯೂ ತನ್ನನ್ನು ತಾನು ಉದ್ಧರಿಸಿ ಕೊಳ್ಳಲು 84 ಲಕ್ಷ ಜೀವಜಾತಿಗಳಾಗಿ ಜನ್ಮವೆತ್ತಿ, ಅನುಭವಗಳನ್ನು ಪಡೆಯುತ್ತಾ, ಪಾಠಗಳನ್ನು ಕಲಿಯುತ್ತಾ, ಮಾನವ ಜನ್ಮಕ್ಕೆ ಬಂದ ನಂತರ "ತಾನು ಯಾರು? ತಾನು ಎಲ್ಲಿಂದ ಬಂದೆ? ಎಲ್ಲಿಗೆ ಹೋಗಬೇಕು? ಹೋಗಲು ಭೂಮಿಯ ಮೇಲೆ ಏನು ಮಾಡಬೇಕು?" ಎನ್ನುವ ಪಾಠಗಳನ್ನು ಗುರುವಿನ ಮೂಲಕ ಕಲಿತು, ಆ ಮಾರ್ಗದಲ್ಲಿ ಪ್ರಯಾಣಿಸಿದಾಗ ಈ ಆತ್ಮಕ್ಕೆ ಮುಕ್ತಿ, ಮೋಕ್ಷ ದೊರೆಯುತ್ತದೆ. ಅಂದರೆ ಇನ್ನು ಜನ್ಮ ಎತ್ತುವ ಅಗತ್ಯವಿಲ್ಲ ಎಂದು ತಿಳಿದುಕೊಂಡು ಅದನ್ನೇ ಬೋಧಿಸಬೇಕು.

ಈ ಸತ್ಯವನ್ನು ಬೋಧಿಸಲು ಭಗವಂತನು ನಿನ್ನ ದೇಹವನ್ನು ಆರಿಸಿಕೊಂಡಿದ್ದಾನೆ.

ನೀವು ಈ ಕೆಲಸವನ್ನು ಸಂತೋಷದಿಂದ ಮಾಡಬೇಕು. ನೀವು ಹಾಗೆ ಮಾಡಿದಾಗ ಆ ಪರಮಾತ್ಮನು ನಿಮಗೆ ಬೇಕಾದಷ್ಟು ಶಕ್ತಿಯನ್ನು ನೀಡುತ್ತಾನೆ. ನಿರಂತರವಾಗಿ ಸಾಧನೆ ಮಾಡದೆ ಎದುರಿಗಿರುವವರಿಗೆ ಹೇಳುವ ಅರ್ಹತೆ ನಿಮಗಿಲ್ಲ ಎಂಬುದನ್ನು ಗಮನಿಸಿ. ಆಚರಿಸದೆ ಹೇಳುವವನು ಆಚಾರ್ಯನಲ್ಲ. ಯಾರು ಆಚರಿಸಿ ತೋರಿಸುತ್ತಾರೋ ಅವರೇ ಆಚಾರ್ಯರು. ಆದ್ದರಿಂದ ಗುರುವಿನ ಬಳಿ ವಿದ್ಯೆಯನ್ನು ಕಲಿತು, ಅದನ್ನು ಆಚರಿಸಿ, ಹತ್ತು ಮಂದಿಯಿಂದ ಆಚರಿಸುವಂತೆ ಮಾಡಬೇಕು.

ನೀವು ಸಾಗುವ ದಾರಿಯಲ್ಲಿ ಯಾವುದೇ ಅಡೆತಡೆಗಳಿಲ್ಲದಂತೆ ಆ ಪರಮಾತ್ಮನು ನಿರಂತರವಾಗಿ ನೋಡುತ್ತಿರುತ್ತಾನೆ. ಅದಕ್ಕಾಗಿಯೇ ನಿಮ್ಮಲ್ಲಿರುವ ಪ್ರತಿಭೆಯನ್ನು ಗುರುತಿಸಿ ಅದನ್ನು ಹೊರತರುವ ಮಾರ್ಗವೇ ಧ್ಯಾನ. ಪ್ರತಿಯೊಬ್ಬರಲ್ಲಿಯೂ ಅನಂತವಾದ ಶಕ್ತಿಯಿದೆ, ಅದನ್ನು ಹೊರತೆಗೆಯುವ ಮಾರ್ಗವೇ 'ಶ್ವಾಸದ ಮೇಲೆ ಗಮನ' ಎಂಬ ಧ್ಯಾನ; ಇದಲ್ಲದೆ ಬೇರೆ ದಾರಿಯಿಲ್ಲ.

ನಿಮ್ಮ ಮನಸ್ಸು ಹೊರಜಗತ್ತಿನಲ್ಲಿ ಸಂಚರಿಸುವಾಗ ಸಂಕುಚಿತವಾಗಿರುತ್ತದೆ, ಅದೇ ಅಂತರಂಗದ ಕಡೆಗೆ ಹೋದಾಗ ವಿಶಾಲತೆಯನ್ನು ಪಡೆಯುತ್ತದೆ. ಅಂದರೆ ಎಲ್ಲರಿಗೂ ಸಹಾಯ ಮಾಡಬೇಕು, ಎಲ್ಲರನ್ನೂ ಜ್ಞಾನವಂತರನ್ನಾಗಿ ಮಾಡಬೇಕು

ಎಂಬ ಬಯಕೆಯಿರುವ ಮನಸ್ಸು ತುಂಬಾ ದೊಡ್ಡದು. ಅಂತಹ ಮನೋಭಾವವನ್ನು ಬೆಳೆಸಿಕೊಳ್ಳುತ್ತಾ, ಎಲ್ಲರೂ ಚೆನ್ನಾಗಿರಲಿ ಎಂಬ ಆಸೆ ಪ್ರತಿಯೊಬ್ಬರಲ್ಲೂ ಇರಬೇಕು.

ಅದಕ್ಕಾಗಿಯೇ ನಮ್ಮ ಮನಸ್ಸು ಈ ಪಂಚಾವಸ್ಥೆಗಳಲ್ಲಿದ್ದಾಗ (ಐದು ಸ್ಥಿತಿಗಳು), ಮೊದಲು ನಾವು ನಮಗಾಗಿಯೇ ಬದುಕುತ್ತಿದ್ದೇವೆ ಅಂದುಕೊಳ್ಳುತ್ತೇವೆ. ಆದರೆ ಕೊನೆಯಲ್ಲಿ, ಈ ದೇಹವನ್ನು ತೆಗೆದುಕೊಂಡಿರುವುದು ಎಲ್ಲರಿಗಾಗಿಯೇ ಎಂಬುದು ಅರ್ಥವಾಗುತ್ತದೆ. ಹಾಗೆ ಅರ್ಥವಾದಾಗಲೇ ಆನಂದಮಯವಾದ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ.

ಆಧ್ಯಾತ್ಮಿಕತೆಗೆ ಬಂದವರ ಜೀವನ ಹೇಗಿರಬೇಕು?

ಪ್ರತಿಯೊಬ್ಬ ಮಾನವನಿಗೂ ಲೌಕಿಕ ಜೀವನ ಮತ್ತು ಆಧ್ಯಾತ್ಮಿಕ ಜೀವನ ಎಂಬ ಎರಡು ಮಗ್ಗಲುಗಳಿರುತ್ತವೆ. ಆದರೆ ಕೆಲವು ಮಾನವರು ಲೌಕಿಕ ಜೀವನವೇ ಶಾಶ್ವತವೆಂದು ಭಾವಿಸುತ್ತಾರೆ. ಅಂತಹವರು ಯಾವಾಗಲೂ ಚಿಂತೆಯಲ್ಲಿ ಮುಳುಗಿ ತಮ್ಮ ಜೀವನವನ್ನು ವ್ಯರ್ಥ ಮಾಡಿಕೊಳ್ಳುತ್ತಾರೆ. ಭೋಗಭಾಗ್ಯಗಳ ಹಿಂದೆ, ಹಣದ ಹಿಂದೆ, ಪದವಿಗಳ ಹಿಂದೆ ಬಿದ್ದು ಜೀವನವಿಡೀ ಕಳವಳದಲ್ಲೇ ಕಳೆಯುತ್ತಾರೆ. ಹಾಗೆಯೇ ಜೀವನವನ್ನು ಪೂರೈಸಿ, ಏನನ್ನೂ ಸಾಧಿಸಲಾಗದೆ ನಿರ್ಗಮಿಸುತ್ತಾರೆ.

ಆದರೆ, ಆ ಲೌಕಿಕ ಜೀವನದಿಂದ ಆಧ್ಯಾತ್ಮಿಕ ಜೀವನಕ್ಕೆ ಬರಬೇಕೆಂದರೆ ಅವರು ಎಷ್ಟೋ ಪುಣ್ಯ, ಎಷ್ಟೋ ಸತ್ಕರ್ಮಗಳನ್ನು ಮಾಡಿದರೆ ಹೊರತು ಆಧ್ಯಾತ್ಮಿಕ ಜೀವನಕ್ಕೆ ಕಾಲಿಡಲು ಸಾಧ್ಯವಿಲ್ಲ. ಇಂತಹ ಅಪರೂಪದ ಮತ್ತು ದಿವ್ಯವಾದ ಜೀವನ ನಿಮಗೆ ಲಭಿಸಿರುವುದರಿಂದ ನೀವು ಅತ್ಯಂತ ಅದೃಷ್ಟವಂತರು. ಈ ದೇಹವಿರುವಾಗಲೇ ಈ ದೇಹವನ್ನು ಸೃಷ್ಟಿಸಿದವನನ್ನು ದರ್ಶಿಸುವುದೇ ಮಾನವ ಜನ್ಮದ ಪರಮ ಗುರಿ, ಆಗಲೇ ಮೋಕ್ಷ ಲಭಿಸುತ್ತದೆ.

ಈ ಆಧ್ಯಾತ್ಮಿಕ ಜೀವನದಲ್ಲಿ ಇರುವವರು ಅಂದರೆ ಈ ದಿವ್ಯ ಜೀವನದಲ್ಲಿ ಇರುವವರು ಯಾವಾಗಲೂ ದಿವ್ಯ ಚಿಂತನೆಯಲ್ಲಿರುತ್ತಾರೆ. ದಿವ್ಯ ಚಿಂತನೆ ಎಂದರೆ ಉನ್ನತವಾದ ಆಲೋಚನೆ. ಉನ್ನತ ಆಲೋಚನೆ ಎಂದರೆ ಈ ಸೃಷ್ಟಿಯಲ್ಲಿ ಪರಮಾತ್ಮನಿಗಿಂತ ದೊಡ್ಡದು ಯಾವುದೂ ಇಲ್ಲ ಎಂಬ ಅರಿವು. ಆದ್ದರಿಂದ ಆತನನ್ನು ತಿಳಿದುಕೊಳ್ಳುವುದು ಹೇಗೆ? ಆತನನ್ನು ತಲುಪುವುದು ಹೇಗೆ? ಎಂಬ ಆಲೋಚನೆಯೇ ದಿವ್ಯ ಚಿಂತನೆ.

ದೇಹವಿರುವಾಗಲೇ ಆತನನ್ನು ದರ್ಶಿಸುವುದರಿಂದ ಮೋಕ್ಷ ಸಿಗುತ್ತದೆ ಎಂದು ಗುರುಗಳ ಮೂಲಕ ತಿಳಿದುಕೊಳ್ಳುತ್ತಾರೆ. ಅದಕ್ಕಾಗಿಯೇ ಅವರ ದೃಷ್ಟಿ ಸದಾ ಪರಮಾತ್ಮನ ಮೇಲಿರುತ್ತದೆ. ಆ ಪರಮಾತ್ಮನನ್ನು ಹೇಗೆ ಸೇರಬೇಕು ಎಂಬ ಆಲೋಚನೆಯಲ್ಲೇ

ಇರುತ್ತಾರೆ. ಅವರು ಯಾವಾಗಲೂ ವರ್ತಮಾನದಲ್ಲಿ (Present) ಬದುಕುತ್ತಾರೆ, ಅವರ ಆಲೋಚನೆಗಳು ಕೂಡ ವರ್ತಮಾನದಲ್ಲೇ ಇರುತ್ತವೆ ಮತ್ತು ಯಾವಾಗಲೂ ಸಕಾರಾತ್ಮಕ ಚಿಂತನೆಯಲ್ಲಿ (Positive Tinking)ಇರುತ್ತಾರೆ.

ಜೀವನದಲ್ಲಿ ಏನೇ ನಡೆದರೂ ಅದೆಲ್ಲವೂ ನನ್ನ ಒಳ್ಳೆಯದಕ್ಕೇ ಎಂದು ಭಾವಿಸಬೇಕು. ಇಂತಹ ದಿವ್ಯ ಜೀವನವನ್ನು ನಡೆಸುವವರನ್ನು 'ದಿವ್ಯ ಮಾನವರು' ಎಂದು ಕರೆಯಬಹುದು, ಏಕೆಂದರೆ ಇವರು ಪರಮಾತ್ಮನಿಗಾಗಿ ಸಾಧನೆ ಮಾಡುತ್ತಿರುತ್ತಾರೆ.

ಇವರ ಆಲೋಚನೆ ಹೇಗಿರುತ್ತದೆ ಎಂದರೆ: "ನಾನು ಈ ಭೂಮಿಗೆ ಬರುವ ಹೊತ್ತಿಗಾಗಲೇ, ಭಗವಂತನು ಪಂಚಭೂತಗಳ ಮೂಲಕ ಮತ್ತು ಪ್ರಕೃತಿಯ ಮೂಲಕ ನನಗೆ ಬೇಕಾದ ಎಲ್ಲವನ್ನೂ ಸಿದ್ಧಪಡಿಸಿಟ್ಟಿದ್ದಾನೆ. ನನಗೆ ಬೇಕಾದವೆಲ್ಲವೂ ಈ ಭೂಮಿಯ ಮೇಲೆಯೇ ಇವೆ, ಯಾವುದಕ್ಕಾಗಿಯೂ ನಾನು ಹುಡುಕಾಡಬೇಕಿಲ್ಲ" ಎಂದು ಇವರು ಅರಿತುಕೊಳ್ಳುತ್ತಾರೆ.

ಮಾನವನಿಗೆ ಶರೀರ ಇರುವುದರಿಂದ ಪ್ರತಿದಿನ ಆಹಾರದ ಅಗತ್ಯವಿರುತ್ತದೆ. ಹಾಗಾಗಿಯೇ ನಾವು ಈ ಭೂಮಿಯ ಮೇಲೆ ಹುಟ್ಟುವುದಕ್ಕಿಂತ ಮುಂಚೆಯೇ ನಮಗಾಗಿ ಆಹಾರವು ಸೃಷ್ಟಿಸಲ್ಪಟ್ಟಿದೆ. ಸಾಧನೆ ಮಾಡುವವರು ಈ ಎಲ್ಲಾ ಏರ್ಪಾಟುಗಳನ್ನು ಭಗವಂತನು ತನಗಾಗಿ ಮಾಡಿದ್ದಾನೆ ಎಂಬ ಕೃತಜ್ಞತಾ ಭಾವವನ್ನು ಹೊಂದಿರುತ್ತಾರೆ.

ನೀವು ಪ್ರತಿದಿನ ಊಟ ಮಾಡುವಾಗ ಆ ಭಗವಂತನಿಗೆ ಕೃತಜ್ಞತೆ ಸಲ್ಲಿಸುತ್ತಾ ಉಣ್ಣಬೇಕು. ಈ ಶರೀರವನ್ನು ಕಾಪಾಡಲು ಆಹಾರವನ್ನು ನೀಡಿ, ಸಾಧನೆಗೆ ಅನುಕೂಲವಾಗುವಂತೆ ಶರೀರವನ್ನು ಆರೋಗ್ಯವಾಗಿಟ್ಟಿರುವ ಆ ಭಗವಂತನಿಗೆ ಪ್ರತಿದಿನ ಧನ್ಯವಾದಗಳನ್ನು ಅರ್ಪಿಸಬೇಕು.

ಸಾಧನೆ ಮಾಡುವ ನೀವು ಯಾವಾಗಲೂ ತೃಪ್ತಿಯಿಂದ ಜೀವಿಸಬೇಕು, ಅಂದರೆ ಯಾವುದೇ ಚಿಂತೆಯಿಲ್ಲದೆ ಸಾಧನೆ ಮಾಡಬೇಕು. ಚಿಂತೆಯಲ್ಲಿರುವವನಿಗೆ ಎಂದಿಗೂ ಸಾಧನೆ ಕೈಗೂಡುವುದಿಲ್ಲ. ಆದ್ದರಿಂದ ಸಾಧನೆ ಮಾಡುವಾಗ ಮೌನವಾಗಿರಬೇಕು ಮತ್ತು ಜ್ಞಾನವನ್ನು ಹೆಚ್ಚಿಸಿಕೊಳ್ಳುವ ತಪನೆ ಹೊಂದಿರಬೇಕು.

"ಇದ್ದದ್ದೇ ಸಾಕು" ಎಂದು ಯಾವಾಗ ಅಂದುಕೊಳ್ಳುತ್ತೀರೋ, ಆಗಲೇ ಸಾಧನೆಯು ಉತ್ತಮವಾಗಿ ಸಾಗುತ್ತದೆ. ಅದಕ್ಕಾಗಿಯೇ ಮೌನ, ತಪಸ್ಸು ಮತ್ತು ಸ್ವಾಧ್ಯಾಯ ಎಂಬವು ಬಹಳ ಮುಖ್ಯ. ತಪಸ್ಸು ಅಂದರೆ ಪ್ರಾಪಂಚಿಕ ಅಗತ್ಯಗಳನ್ನು ಮತ್ತು ಪ್ರಾಪಂಚಿಕ ಆಸೆಗಳನ್ನು ಕಡಿಮೆ ಮಾಡಿಕೊಳ್ಳುವುದು.

ಮನುಷ್ಯನು ಪ್ರಾಪಂಚಿಕವಾಗಿ ಎಷ್ಟು ಎತ್ತರಕ್ಕೆ ಬೆಳೆಯುತ್ತಾನೋ ಅಷ್ಟೇ ಅಧೋಗತಿಗೆ ಇಳಿಯುತ್ತಾನೆ. ಯಾಕೆಂದರೆ ಪ್ರಾಪಂಚಿಕ ಆಸೆಗಳು ಒಂದಾದ ನಂತರ

ಒಂದು ನಿರಂತರವಾಗಿ ಹುಟ್ಟುತ್ತಲೇ ಇರುತ್ತವೆ. ಅಂತಹ ಪ್ರಾಪಂಚಿಕ ಆಸೆಗಳ ಬೆನ್ನತ್ತಿದಾಗ ಸಾಧನೆಯಲ್ಲಿ ಪ್ರಗತಿ ಇರುವುದಿಲ್ಲ. ಅದಕ್ಕಾಗಿಯೇ ಮೌನವಾಗಿರುವುದು ಮೊದಲ ಹೆಜ್ಜೆಯಾದರೆ, ತಪಸ್ಸು ಎಂದರೆ ಲೌಕಿಕ ಅಗತ್ಯಗಳನ್ನು ಕಡಿಮೆ ಮಾಡಿಕೊಳ್ಳುತ್ತಾ, ಏಕಾಂತ ವಾಸವನ್ನು ಇಷ್ಟಪಡುವುದು.

ಒಬ್ಬ ಸಾಧಕನು ಯಾಕೆ ಹೆಚ್ಚು ಏಕಾಂತದಲ್ಲಿ ಇರಬೇಕೆಂದರೆ, ಬೇರೆಯವರಿಂದಾಗಿ ನಿನ್ನ ಮನಸ್ಸು ಚಂಚಲ ಸ್ಥಿತಿಗೆ ತಲುಪುತ್ತದೆ ಮತ್ತು ನೀನು ಮತ್ತೆ ಚಿಂತೆಗಳಲ್ಲಿ ಮುಳುಗಿಹೋಗುತ್ತೀಯೆ. ಆದ್ದರಿಂದಲೇ ಹೆಚ್ಚು ಏಕಾಂತವಾಸವನ್ನು ಬಯಸಬೇಕು.

ಜ್ಞಾನದ ಶಕ್ತಿ: ನಿನ್ನ ಜ್ಞಾನದ ಮೂಲಕ ನೀನು ಹತ್ತು ಜನರಿಗೆ ಉಪಯೋಗವಾಗಬೇಕು. ನಿನ್ನ ಜ್ಞಾನವು ಇತರರಿಗೆ ನೆರವಾದಾಗ ಮಾತ್ರ ನೀನು ಮಹಾತ್ಮನಾಗುತ್ತೀಯೆ. ನಿಮ್ಮಲ್ಲಿ ಜ್ಞಾನವಿದ್ದು, ಅದನ್ನು ಎಲ್ಲರಿಗೂ ಹಂಚಿದಾಗ ಜನರು ನಿಮ್ಮತ್ತ ಆಕರ್ಷಿತರಾಗುತ್ತಾರೆ. ಹಣ, ರೂಪ ಅಥವಾ ಪದವಿಗಳ ಮೂಲಕ ಉಂಟಾಗುವ ಆಕರ್ಷಣೆ ಕೇವಲ ತಾತ್ಕಾಲಿಕ.

ನಿಮ್ಮ ಬಳಿ ಹಣವಿದ್ದಾಗ ಅವನು ಎಂತಹ ಶ್ರೀಮಂತ ಅಲ್ವಾ! ಎಂದು ಜನರು ಸ್ವಲ್ಪ ಕಾಲ ಆಕರ್ಷಿತರಾಗುತ್ತಾರೆ. ಅಧಿಕಾರವಿದ್ದಾಗ ಆ ಪದವಿ ಇರುವವರೆಗೂ ಗೌರವಿಸುತ್ತಾರೆ, ಪದವಿ ಹೋದ ತಕ್ಷಣ ಯಾರೂ ಹಿಡಿಸಿಕೊಳ್ಳುವುದಿಲ್ಲ. ಹಾಗೆಯೇ ಒಬ್ಬ ಸಿನಿಮಾ ನಟ ವಯಸ್ಸಿನಲ್ಲಿರುವಾಗ, ಅಂದವಾಗಿರುವಾಗ ಜನರು ನೋಡಲು ಇಷ್ಟಪಡುತ್ತಾರೆ, ಆದರೆ ಅವರು ವೃದ್ಧರಾದ ಮೇಲೆ ಅವರ ಮುಖವನ್ನೂ ನೋಡಲು ಇಷ್ಟಪಡುವುದಿಲ್ಲ.

ಆದರೆ ಒಬ್ಬ ಜ್ಞಾನಿಗೆ ಇರುವ ಆಕರ್ಷಣೆ ನಿರಂತರವಾಗಿ ಬೆಳಗುವ ದೀಪದಂತೆ. ಆ ದೀಪವು ಹೇಗೆ ಬೆಳಕನ್ನು ನೀಡುತ್ತದೆಯೋ, ಹಾಗೆಯೇ ಆ ಜ್ಞಾನಿಯು ತನ್ನ ಜ್ಞಾನವನ್ನು ಎಲ್ಲರಿಗೂ ಹಂಚುತ್ತಿರುತ್ತಾನೆ.

ಈ ಸೃಷ್ಟಿಯ ರಹಸ್ಯವೇನೆಂದರೆ: ಹಂಚಿದರೆ ಹೆಚ್ಚಾಗುತ್ತದೆ, ದಾನ ಮಾಡಿದರೆ ಮುಗಿದುಹೋಗುವುದಿಲ್ಲ. ಅದು ಲೌಕಿಕ ಜ್ಞಾನವಿರಲಿ ಅಥವಾ ಆಧ್ಯಾತ್ಮಿಕ ಜ್ಞಾನವಿರಲಿ.

ಆದರೆ ಹಂಚಿದರೆ ವೃದ್ಧಿಯಾಗುತ್ತದೆ. ಅದಕ್ಕಾಗಿಯೇ ಒಬ್ಬ ಜ್ಞಾನಿಯು ಯಾವಾಗಲೂ ಸಾಧನೆ ಮಾಡುತ್ತಾ ತನ್ನ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾನೆ. ವೃದ್ಧಿಸಿಕೊಂಡ ಜ್ಞಾನವನ್ನು ಸಹ ಹಂಚುತ್ತಾನೆ. ಅದಕ್ಕಾಗಿಯೇ ಪತ್ರಿಜಿಯವರು ಯಾವಾಗಲೂ "ಹಂಚಿದರೆ ವೃದ್ಧಿಯಾಗುತ್ತದೆ, ಬಚ್ಚಿಟ್ಟರೆ ದೋಚಲ್ಪಡುತ್ತದೆ, ಅದು ಯಾವುದಕ್ಕೂ ಪ್ರಯೋಜನಕ್ಕೆ ಬರುವುದಿಲ್ಲ" ಎಂದು ಹೇಳುತ್ತಿದ್ದರು.

ಅದಕ್ಕಾಗಿಯೇ ಹರಿಯುವ ನದಿಯ ನೀರು ಯಾವಾಗಲೂ ಶುಭ್ರವಾಗಿರುತ್ತದೆ.

ಹಾಗೆಯೇ ನಮ್ಮ ಮನೆಯ ಬಾವಿಯ ನೀರನ್ನು ಪ್ರತಿದಿನ ಸೇದುತ್ತಿದ್ದರೆ ಆ ನೀರು ಸ್ವಚ್ಛವಾಗಿರುತ್ತದೆ. ಆದರೆ ಯಾರನ್ನೂ ಸೇದಲು ಬಿಡದೆ ಹಾಗೆಯೇ ಇಟ್ಟರೆ ಆ ನೀರು ಕೆಲವು ದಿನಗಳಿಗೆ ಕೆಟ್ಟುಹೋಗುತ್ತದೆ. ಹಾಗೆಯೇ ನೀವು ಜೀವನವಿಡೀ ಕಷ್ಟಪಟ್ಟು ಸಂಪಾದಿಸಿ ಬಚ್ಚಿಟ್ಟ ಹಣವನ್ನೆಲ್ಲಾ ನಿಮ್ಮ ಮಕ್ಕಳು ದೋಚಿಕೊಳ್ಳುತ್ತಾರೆ, ನಿಮಗೆ ಯಾವುದಾದರೂ ಪದವಿಗಳಿದ್ದರೆ ಪಕ್ಕದವನು ದೋಚಿಕೊಳ್ಳುತ್ತಾನೆ, ಆದರೆ ನಿಮ್ಮಲ್ಲಿರುವ ಜ್ಞಾನವನ್ನು ಮಾತ್ರ ಯಾರೂ ದೋಚಲಾರರು.

ವಶಿಷ್ಠ ಮಹರ್ಷಿಗಳು ಮಾನವರಿಗೆ ಎಲ್ಲಕ್ಕಿಂತ ಹೆಚ್ಚಾಗಿ ಮೂರು ರೀತಿಯ ಮದಗಳು (ಅಹಂಕಾರಗಳು) ಇರುತ್ತವೆ ಎಂದು ಹೇಳುತ್ತಾರೆ. ಅವುಗಳೆಂದರೆ...

ರೂಪ ಮದ, ಧನ ಮದ, ವಿದ್ಯಾ ಮದ.

● **ರೂಪ ಮದ:** "ನಾನು ಸುಂದರಿ/ಸುಂದರ, ನಾನು ನೋಡಲು ಚೆನ್ನಾಗಿದ್ದೇನೆ" ಎಂಬ ಅಹಂಕಾರ.

● **ವಿದ್ಯಾ ಮದ:** "ನಾನು ಚೆನ್ನಾಗಿ ಓದುತ್ತೇನೆ, ನನ್ನ ಹತ್ತಿರ ಎಷ್ಟೋ ಡಿಗ್ರಿಗಳಿವೆ" ಎಂಬ ಅಹಂಕಾರ.

● **ಧನ ಮದ**: "ನಾನು ತುಂಬಾ ಶ್ರೀಮಂತ, ಕೋಟ್ಯಾಧಿಪತಿ" ಎಂಬ ಅಹಂಕಾರ.

ಆದರೆ ಈ ಕಲಿಯುಗದಲ್ಲಿ ವಿದ್ಯೆಯ ಮೇಲಿನ ಮದಕ್ಕಿಂತ ಹೆಚ್ಚಾಗಿ, ಅಧಿಕಾರದ ಮೇಲಿನ ಆಸಕ್ತಿಯಿಂದಾಗಿ ಪದವಿ ಮದ (ಅಧಿಕಾರದ ಅಹಂಕಾರ) ಕೂಡ ಇದೆ ಎಂದು ಹೇಳಬಹುದು. ಆದರೆ ಜ್ಞಾನವುಳ್ಳವನು ಯಾವಾಗಲೂ ಗೌರವಿಸಲ್ಪಡುತ್ತಾನೆ. ಅದಕ್ಕಾಗಿಯೇ ಜ್ಞಾನವನ್ನು ಬೆಳಕಿಗೆ ಮತ್ತು ಅಜ್ಞಾನವನ್ನು ಕತ್ತಲೆಗೆ ಹೋಲಿಸಿದ್ದಾರೆ. ಒಂದು ಕೊಠಡಿಯ ಬಾಗಿಲುಗಳನ್ನು 100 ವರ್ಷಗಳ ಕಾಲ ಮುಚ್ಚಿಟ್ಟರೂ ಅದು ಕತ್ತಲೆಯಿಂದಲೇ ಕೂಡಿರುತ್ತದೆ. ಆದರೆ ಆ ಕೊಠಡಿಯ ಕತ್ತಲೆಯನ್ನು ಹೋಗಲಾಡಿಸಬೇಕೆಂದರೆ, ಒಂದು ಸಣ್ಣ ದೀಪವನ್ನು ಹಚ್ಚಿದರೆ ಸಾಕು, ಅಲ್ಲಿರುವ ಕತ್ತಲೆಯೆಲ್ಲಾ ಮಾಯವಾಗುತ್ತದೆ. ಹಾಗೆಯೇ ನಿಮ್ಮಲ್ಲಿರುವ ಅಜ್ಞಾನವನ್ನು ಕೇವಲ ಒಬ್ಬ ಸದ್ಗುರು ಮಾತ್ರ

ಹೋಗಲಾಡಿಸಬಲ್ಲನು. ನಿಮ್ಮಲ್ಲಿರುವ ಜನ್ಮ ಜನ್ಮಾಂತರಗಳ ಅಜ್ಞಾನ ತೊಲಗಬೇಕೆಂದರೆ ಒಬ್ಬ ಸದ್ಗುರುವನ್ನು ಆಶ್ರಯಿಸಬೇಕು.

ಅಜ್ಞಾನವೆಂದರೆ ಪ್ರಪಂಚ ಶಾಶ್ವತ, ಶರೀರ ಶಾಶ್ವತ ಎಂದು ಅಂದುಕೊಳ್ಳುವುದು. ಜ್ಞಾನವೆಂದರೆ ಈ ಪ್ರಪಂಚವು ನಶಿಸಿಹೋಗುತ್ತದೆ, ಶರೀರವು ನಶಿಸಿಹೋಗುತ್ತದೆ, ಆದರೆ ಆತ್ಮ ನಶಿಸದು. ನಾನು ಆತ್ಮನು, ಪರಮಾತ್ಮನಿಂದ ಬಂದ ಅಂಶಾತ್ಮನು. ನಾನು ಕೂಡ ಪರಮಾತ್ಮನ ಸ್ಥಿತಿಗೆ ತಲುಪಬಲ್ಲೆ ಎಂದು ತಿಳಿದುಕೊಳ್ಳುವುದೇ ಜ್ಞಾನ.

ಈ ಜ್ಞಾನವನ್ನು ಪಡೆದ ತಕ್ಷಣವೇ ನಿನ್ನ ಅಜ್ಞಾನವು ಹೋಗುತ್ತದೆ.

ಅಜ್ಞಾನವಿರುವವರೆಗೂ ಚಿಂತೆ ಇರುತ್ತದೆ. "ನಾನು ದೇಹವಲ್ಲ, ನಾನು ಆತ್ಮ" ಎಂದು ಸಾಧನೆಯ ಮೂಲಕ ಅನುಭವಪೂರ್ವಕವಾಗಿ ತಿಳಿದುಕೊಂಡ ದಿನ, ಆತ್ಮನಲ್ಲಿರುವ ಅನಂತವಾದ ಜ್ಞಾನವನ್ನು ಅನುಭವಿಸುತ್ತೀರಿ. ನೀವು ಚಿಂತೆಯಲ್ಲಿ ಇರಬಾರದು, ಆತ್ಮ ಚಿಂತನೆಯಲ್ಲಿ ಇರಬೇಕು ಎಂದು ಪದೇ ಪದೇ ಗುರುಗಳು ಹೇಳುತ್ತಿರುತ್ತಾರೆ.

ಅದಕ್ಕೇ ನಾವು ಯಾವಾಗಲೂ ಅಜ್ಞಾನಿಯ ಲಕ್ಷಣ ಹೇಗಿದೆ? ಸಾಧಕನ ಲಕ್ಷಣ ಹೇಗಿದೆ? ಪ್ರಾಪಂಚಿಕ ಜೀವನದಲ್ಲಿ ಇರುವವನ ಆಲೋಚನೆಗಳು ಹೇಗಿವೆ? ಆಧ್ಯಾತ್ಮಿಕ ಜೀವನದಲ್ಲಿ ಸಾಧಕನ ಆಲೋಚನೆಗಳು ಹೇಗಿವೆ? ಪ್ರಾಪಂಚಿಕ ಜೀವನದಲ್ಲಿ ಇರುವವನು ಎಷ್ಟು ಆನಂದವಾಗಿ ಜೀವಿಸುತ್ತಿದ್ದಾನೆ? ಜ್ಞಾನವನ್ನು ಸಂಪಾದಿಸಿದವನು ಎಷ್ಟು ಆನಂದವಾಗಿ ಜೀವಿಸುತ್ತಿದ್ದಾನೆ? ಎಂಬುದನ್ನು ವಿಚಾರಣೆ ಮಾಡಿದರೆ ತಿಳಿಯುತ್ತದೆ.

ಜ್ಞಾನವಿರುವವನು ಪರಮಾತ್ಮನ ಚಿಂತನೆಯಲ್ಲಿರುತ್ತಾನೆ. ಎಷ್ಟೋ ಆನಂದ ವಾಗಿರುತ್ತಾನೆ. ಎಷ್ಟೇ ನಷ್ಟ ಬಂದರೂ ಸಹ ಭರಿಸುವಂತಹ ಸ್ಥಿತಿಗೆ ಬೆಳೆಯುತ್ತಾನೆ. ಅದಕ್ಕೇ ಪ್ರಾಪಂಚಿಕ ಜೀವನವು ಚಿಂತೆಯಿಂದ ಮೊದಲಾಗಿ ಚಿಂತೆಯಲ್ಲೇ ಮರಣಿಸುತ್ತದೆ, ಏಕೆಂದರೆ ಆ ಜೀವನವು ಎಂದಿಗೂ ತೃಪ್ತಿಯನ್ನು ನೀಡುವುದಿಲ್ಲ.

ಆಸೆಯಿಂದ ಮರಣಿಸುವವನು ಯಾವಾಗಲೂ ಚಿಂತೆಯಲ್ಲೇ ಇರುತ್ತಾನೆ. ಆಶಯಕ್ಕಾಗಿ ಜೀವಿಸುವವನು ಯಾವಾಗಲೂ ಪರಮಾತ್ಮನ ಚಿಂತನೆಯೊಂದಿಗೆ ತೃಪ್ತಿಕರವಾದ ಜೀವನವನ್ನು ಅನುಭವಿಸುತ್ತಾನೆ. ಸಾಧಕನು ಯಾವಾಗಲೂ ಸಾಧಕನಂತೆಯೇ ಇರುವುದಿಲ್ಲ ಗುರುವು ನೀಡುವ ತರಬೇತಿಯ ಮೂಲಕ ಉನ್ನತವಾಗಿ ಬೆಳೆಯುತ್ತಿರಬೇಕು. ಸಾಧನೆಯ ಮೂಲಕ ಜ್ಞಾನವು ಹೆಚ್ಚಾದಾಗ ಅದು ನಿನ್ನಷ್ಟಕ್ಕೇ ನಿಂತುಹೋಗದೆ, ನಿನಗೆ ತಿಳಿದಿರುವುದನ್ನು ನಿನ್ನ ಪಕ್ಕದವರಿಗೆ ತಿಳಿಸು; ನೀನು ಯಾವ ಆನಂದವನ್ನು ಪಡೆಯುತ್ತಿದ್ದೀಯೋ ಆ ಆನಂದವನ್ನು ಇತರರಿಗೆ ತಿಳಿಸು; ನೀನು ಯಾವ ಸತ್ಯವನ್ನು ತಿಳಿದುಕೊಂಡೆಯೋ ಆ ಸತ್ಯವನ್ನು ಪಕ್ಕದವರಿಗೆ ತಿಳಿಸು ಎಂದು ಪತ್ರಿಜಿಯವರು ನಮಗೆ ಎಷ್ಟೋ ವಿಷಯಗಳನ್ನು ಬೋಧಿಸಿದ್ದಾರೆ.

ಎಲ್ಲಕ್ಕಿಂತ ದೊಡ್ಡ ಸತ್ಯವೆಂದರೆ ನೀನು ಕೇವಲ ಶರೀರವಲ್ಲ, ಆತ್ಮ. ಆ ಸತ್ಯ ತಿಳಿಯದೆ ಎಲ್ಲರೂ ಅಜ್ಞಾನದಲ್ಲಿದ್ದಾರೆ. ಆ ಸತ್ಯ ತಿಳಿದಾಗ ಎಲ್ಲರೂ ಆನಂದವಾಗಿರುತ್ತಾರೆ. ಏಕೆಂದರೆ ಭಗವಂತ ಯಾರು? ಎಂಬುದು ತಿಳಿಯದೆ ಎಲ್ಲರೂ ಗೊಂದಲದಲ್ಲಿದ್ದಾರೆ. ಭಗವಂತನ ಮೇಲೆ ಭಕ್ತಿಯಿದೆ, ಆದರೆ ಭಗವಂತ ಯಾರೆಂದು ತಿಳಿದುಕೊಳ್ಳಲಾಗದಷ್ಟು ಚಿಂತೆಯಲ್ಲಿ ಮುಳುಗಿದ್ದಾರೆ.

"ಆತ್ಮವೇ" ಭಗವಂತನಾಗಿ ಸರ್ವ ಜೀವಿಗಳ ಶರೀರದಲ್ಲಿ ಅಂತರ್ಯಾಮಿಯಾಗಿ ಇದ್ದಾನೆ. ಆ ಆತ್ಮವನ್ನು ತಿಳಿದುಕೊಳ್ಳುವ ಅರ್ಹತೆ ಕೇವಲ ಮಾನವ ಜನ್ಮಕ್ಕೆ

ಇರುವುದರಿಂದ, ಅಂತಹ ಅಪರೂಪದ ಮಾನವ ಜನ್ಮವನ್ನು ಪಡೆದು ಸದ್ಗುರುವಿನ ಮೂಲಕ ಯಾವ ಸಾಧನೆಯನ್ನು ಮಾಡಿದರೆ ನೀನು 'ಆತ್ಮ' ಎಂಬ ಅನುಭೂತಿಯನ್ನು ಪಡೆಯುತ್ತೀಯೋ ಎಂದು ತಿಳಿದುಕೊಂಡಿದ್ದೀಯೋ, ಆ ಸಾಧನೆಯನ್ನು ಮಾಡಿ ನಾನು ಆತ್ಮ ಎಂಬ ಅನುಭೂತಿಯನ್ನು ಪಡೆದು ಆ ಜ್ಞಾನವನ್ನು ಹತ್ತು ಜನರಿಗೆ ಬೋಧಿಸು ಎಂದು ಗುರುಗಳು ಹೇಳುತ್ತಾರೆ.

ಸದ್ಗುರು ಬಂದ ಮೇಲೆ ಮರಣವೆಂದರೆ ಭಯವಿರುವುದಿಲ್ಲ. ಪತ್ರಿಜಿಯವರನ್ನು ಒಂದು ಸಂದರ್ಶನದಲ್ಲಿ "ನಿಮ್ಮ ನಂತರ ಶಿಷ್ಯರು ಯಾರು?" ಎಂದು ಕೇಳಿದಾಗ, "ನನ್ನ ನಂತರ ಎಲ್ಲರೂ ಪತ್ರಿಜಿಗಳೇ" ಎಂದು ಹೇಳಿದರಂತೆ. ಅದಕ್ಕೇ ಪತ್ರಿಜಿಯವರು "ನಿನ್ನ ಶ್ವಾಸವೇ ನಿನ್ನ ಗುರು" ಎಂದು ಹೇಳುತ್ತಿದ್ದರು. ನಾನು ಈ ವಿಷಯಗಳನ್ನು ಹೇಗೆ ಹೇಳುತ್ತಿದ್ದೇನೆಯೋ, ನೀನು ಕೂಡ ಧ್ಯಾನ ಮಾಡಿದಾಗ ನಿನ್ನಲ್ಲಿರುವ ಜ್ಞಾನವು ಹೊರಬರುತ್ತದೆ.

ನೀನು ಅನಂತ ಜ್ಞಾನವಂತನಾಗುತ್ತೀಯ, ಅನಂತ ಪ್ರಜ್ಞಾವಂತನಾಗುತ್ತೀಯ, ಬ್ರಹ್ಮಜ್ಞಾನಿಯಾಗುತ್ತೀಯ ಎನ್ನುವುದೇ ಸಿಂಪಲ್ ಸೀಕ್ರೆಟ್ "ಶ್ವಾಸದ ಮೇಲೆ ಗಮನ " ಇದು ಪಡೆಯಬೇಕಾದದ್ದನ್ನು ಖಂಡಿತವಾಗಿ ಪಡೆಯುತ್ತೀಯಾ. ನೀನು ಪಡೆದದ್ದನ್ನು ಹತ್ತು ಜನರಿಗೆ ಹಂಚು" ಎಂದು ಹೇಳಿ ಅವರು ನಿಶ್ಚಿಂತೆಯಾಗಿ ಮರಣಿಸಿದರು.

ಅದಕ್ಕಾಗಿಯೇ ರಾಘವರಾವು ಅವರು ಎಲ್ಲರಿಗೂ ಜ್ಞಾನವನ್ನು ಹಂಚಲು ಹೇಳುತ್ತಿರುತ್ತಾರೆ. ನಾವು ಮಾಡುವ ತಪ್ಪುಗಳನ್ನು ಸರಿಪಡಿಸುತ್ತಿರುತ್ತಾರೆ. ಮೊದಲು ನಮಗೆ ನಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುವ ಧೈರ್ಯವಿರಬೇಕು. ಪಕ್ಕದವರು ನಮ್ಮನ್ನು ಕೀಳಾಗಿ ಕಾಣುತ್ತಾರೋ ಎಂಬ ಭಾವನೆ ಇರಬಾರದು. ಗುರುಗಳಿಗೆ ನಿಮ್ಮ ತಪ್ಪುಗಳು ಮತ್ತು ಒಪ್ಪುಗಳು ಎರಡೂ ತಿಳಿದಿರುತ್ತವೆ. ಆದರೆ ನಾವು ಎಲ್ಲಿ ಎಡವುತ್ತಿದ್ದೇವೆ ಎಂಬುದನ್ನು ಗುರುತಿಸಿ ಗುರುಗಳು ಎಚ್ಚರಿಸುತ್ತಿರುತ್ತಾರೆ.

ಅದಕ್ಕಾಗಿ ನೀವು ಆತಂಕ ಪಡುವ ಅಗತ್ಯವಿಲ್ಲ. "ನನ್ನನ್ನು ಸರಿಪಡಿಸುತ್ತಿದ್ದಾರೆ, ಹೀಗೆ ನನ್ನನ್ನು ತಿದ್ದಿದರೆ ಮಾತ್ರ ನಾನು ಇರುವ ಸ್ಥಿತಿಯಿಂದ ಉನ್ನತ ಸ್ಥಿತಿಗೆ ಬೆಳೆಯಲು ಸಾಧ್ಯ" ಎಂದು ಭಾವಿಸಬೇಕು.

ಏಕೆಂದರೆ ನೀವು ಬೆಳೆಯಲು ಮತ್ತು ಪಾಠಗಳನ್ನು ಕಲಿಯಲು ಈ ಭೂಮಿಯ ಮೇಲೆ ಬಂದಿದ್ದೀರಿ. ಆ ಪಾಠಗಳನ್ನು ಕಲಿಯಲು ಗುರುಗಳು ನಿಮ್ಮನ್ನು ಕ್ಷಣಕ್ಷಣಕ್ಕೂ ತಿದ್ದುತ್ತಿರಬೇಕು. ನೀವು ಸದಾ ಜಾಗೃತರಾಗಿರಬೇಕು (ಎಚ್ಚರದಿಂದಿರಬೇಕು). ಅಲ್ಲದೆ, ಆ ಪರಮಾತ್ಮನ ಚಿಂತನೆಯಲ್ಲಿ ಇದ್ದಾಗ ನೀವು ನಿಶ್ಚಿಂತೆಯಾಗಿ ಜ್ಞಾನವನ್ನು ಪಡೆಯುತ್ತೀರಿ.

ಸಾಧಕನ ಗುರಿ ಆ ಪರಮಾತ್ಮನನ್ನು ಪಡೆಯುವುದು. ಪ್ರಾಪಂಚಿಕ ಜೀವನದಲ್ಲಿ ಇರುವವನ ಗುರಿ ಸುಖ ಭೋಗಗಳನ್ನು ಅನುಭವಿಸುವುದು. ಅದಕ್ಕಾಗಿಯೇ ನಿರಂತರವಾಗಿ "ನೀವು ಎಲ್ಲಿದ್ದೀರಿ? ಎಂತಹ ಆಲೋಚನೆಗಳನ್ನು ಮಾಡುತ್ತಿದ್ದೀರಿ?" ಎನ್ನುವುದನ್ನು ತಿಳಿದುಕೊಂಡು, ನೀವು ಯಾವ ಮಾರ್ಗದಲ್ಲಿ ಇನ್ನೂ ಮುಂದಕ್ಕೆ ಸಾಗಬೇಕು ಎಂದು ಯೋಚಿಸಬೇಕು. "ನಾನು ಹೇಗಿದ್ದೇನೆ? ಪ್ರಾಪಂಚಿಕ ಚಿಂತನೆಯಲ್ಲಿದ್ದೇನಾ? ಅಥವಾ ಆಧ್ಯಾತ್ಮಿಕ ಚಿಂತನೆಯಲ್ಲಿದ್ದೇನಾ?" ಎಂದು ಕ್ಷಣಕ್ಷಣಕ್ಕೂ ನಿಮ್ಮನ್ನು ನೀವು ಗಮನಿಸಿಕೊಳ್ಳುತ್ತಾ ವಿಚಾರಣೆ ಮಾಡುತ್ತಿರಬೇಕು.

ಉದಾಹರಣೆಗೆ, ಒಂದು ಗಿಡ ಬೆಳೆಯಲು ಅದರ ಬೇರೇ ಕಾರಣ. ಆ ಬೇರು ಎಷ್ಟು ಬಲವಾಗಿದ್ದರೆ ಗಿಡ ಅಷ್ಟು ಬಲವಾಗಿ ಬೆಳೆಯುತ್ತದೆ. ಹಾಗೆಯೇ, ಕಾಣಿಸುವ ಈ ಜೀವನಕ್ಕೆ ಕಾಣದ 'ಆತ್ಮ'ವೇ ಆಧಾರ ಎಂದು ತಿಳಿದುಕೊಳ್ಳಬೇಕು. ಅದಕ್ಕಾಗಿಯೇ ಗುರುಗಳು ನೀಡಿದ ಸಾಧನೆ ಮತ್ತು ಸಜ್ಜನ ಸಾಂಗತ್ಯವನ್ನು ಎಷ್ಟು ಹೆಚ್ಚಾಗಿ ಮಾಡುತ್ತೀರೋ ಅಷ್ಟು ಒಳ್ಳೆಯದು.

ಅಷ್ಟೇ ಶ್ರೇಷ್ಠ ಜ್ಞಾನವಂತರಾಗುತ್ತಾರೆ, ಅಷ್ಟೇ ಮಹಾನ್ ಶಕ್ತಿವಂತರಾಗುತ್ತಾರೆ. ಅದಕ್ಕಾಗಿಯೇ ಗುರು–ಶಿಷ್ಯರ ಸಂಬಂಧವು ಬೇರಿನಿದ್ದಂತೆ.

ಎಷ್ಟೋ ಸಾಧನೆ ಮಾಡಿ ಶಕ್ತಿಯನ್ನು ಪಡೆಯುತ್ತಾರೆ, ಆ ಶಕ್ತಿಯನ್ನು ನೀವು ವೃಥಾ ಪೋಲು ಮಾಡಬಾರದು. ನಿಮಗೆ ಸಂಬಂಧವಿಲ್ಲದ ವಿಷಯಗಳಲ್ಲಿ ತಲೆಹಾಕಬಾರದು. ಅದಕ್ಕಾಗಿಯೇ ಮೌನವಾಗಿರುವುದು, ಅನಗತ್ಯ ಆಲೋಚನೆಗಳಿಲ್ಲದಂತೆ ನೋಡಿ ಕೊಳ್ಳುವುದು, ಅನಗತ್ಯ ವ್ಯವಹಾರಗಳಿಲ್ಲದಂತೆ ಜಾಗ್ರತೆ ವಹಿಸುತ್ತಾ ಸಾಧನೆ ಮತ್ತು ಸ್ವಾಧ್ಯಾಯ (ಸ್ವಯಂ ಅಧ್ಯಯನ) ಮಾಡುತ್ತಿರಬೇಕು.

ಸಾಧನೆಯಿಂದ ಶಕ್ತಿಯನ್ನು ಪಡೆಯುತ್ತಾ, ಸ್ವಾಧ್ಯಾಯ ಮತ್ತು ಸಜ್ಜನ ಸಾಂಗತ್ಯ – ಈ ಎರಡರಿಂದ ಜ್ಞಾನವು ಹೆಚ್ಚುತ್ತಿರುತ್ತದೆ. ಇವೆರಡೂ ಖಂಡಿತವಾಗಿಯೂ ಇರಬೇಕು.

ಇವುಗಳನ್ನು ಪಾಲಿಸುತ್ತಾ, ಚಿಂತೆಯಿಲ್ಲದ ಜೀವನ ನಡೆಸುತ್ತಾ, ನಿರಂತರವಾಗಿ ಪರಮಾತ್ಮನ ಚಿಂತನೆಯಲ್ಲಿ ಇರುತ್ತಾರೆ. ಆದ್ದರಿಂದ ಎಂದಿಗೂ ದುಃಖ ಪಡದೆ ಜೀವಿಸಬೇಕು. ಒಂದು ವೇಳೆ ದುಃಖ ಬಂದರೂ ಸಹ, 'ಇದು ನನ್ನ ಕರ್ಮಫಲ, ಅನುಭವಿಸಿದರೆ ತೀರಿಹೋಗುತ್ತದೆ' ಎಂದು ಭಾವಿಸಬೇಕು. ಅಂತಹ ದುಃಖವಿಲ್ಲದ ಜೀವನ ನಡೆಸಲು ಆ ಗುರುಗಳೇ ಕಾರಣ ಎಂದು ಆ ಗುರುಗಳಿಗೆ ಯಾವಾಗಲೂ ಧನ್ಯವಾದಗಳನ್ನು ಹೇಳಬೇಕು.

ಪ್ರಾಪಂಚಿಕ ಜೀವನದಲ್ಲಿ ಮಾನವನು ಹೇಗಿರುತ್ತಾನೆ?

ಪ್ರತಿಯೊಬ್ಬ ಮಾನವನು ಹೇಗೆ ಜನ್ಮತಾಳಿದರೂ, ಯಾವ ಕುಲದಲ್ಲಿ, ಯಾವ ಮತದಲ್ಲಿ ಜನ್ಮತಾಳಿದರೂ ಮೊಟ್ಟಮೊದಲು ಪ್ರಾಪಂಚಿಕ ಜೀವನವನ್ನೇ ನೋಡಿ, ಆ ನಂತರ ಆಧ್ಯಾತ್ಮಿಕ ಜೀವನಕ್ಕೆ ಬರುತ್ತಾನೆ. ಆದರೆ ಕೆಲವರು ಒಂದೇ ಜನ್ಮದಲ್ಲಿ ಪ್ರಾಪಂಚಿಕ ಜೀವನ ಮತ್ತು ಆಧ್ಯಾತ್ಮಿಕ ಜೀವನ ಎರಡನ್ನೂ ಅನುಭವಿಸುತ್ತಾರೆ. ಅಂಥವರು ಒಂದೇ ಜನ್ಮದಲ್ಲಿ ಪೂರ್ಣ ಪುರುಷರಾಗಬಲ್ಲರು. ಆಧ್ಯಾತ್ಮಿಕ ಜೀವನಕ್ಕೆ ಬಂದವರು ತೃಪ್ತಿಯಿಂದ ಬದುಕಲು ಸಾಧ್ಯವಾಗುತ್ತದೆ. ಎಂತಹ ಆತಂಕಗಳು, ಆವೇಶಗಳು ಇಲ್ಲದೆ, ಅರಿಷಡ್ವರ್ಗಗಳನ್ನು ಹತೋಟಿಯಲ್ಲಿಟ್ಟುಕೊಂಡು, ಆ ಭಗವತ್ ತತ್ವವನ್ನು ತಿಳಿದುಕೊಂಡು ಶಾಂತಿಯಿಂದ ಜೀವಿಸುತ್ತಾರೆ. ಅದಕ್ಕಾಗಿಯೇ "ಪ್ರಾಪಂಚಿಕ ಜೀವನಕ್ಕಿಂತ ಆಧ್ಯಾತ್ಮಿಕ ಜೀವನವು ಎಷ್ಟೋ ದೊಡ್ಡದು."

ಮಾನವನು ಪ್ರಾಪಂಚಿಕ ಜೀವನದಲ್ಲಿ ಹೇಗಿರುತ್ತಾನೆ, ಎಂತಹ ಗುಣಗಳನ್ನು ಹೊಂದಿರುತ್ತಾನೆ, ಎಂತಹ ಲಕ್ಷಣಗಳನ್ನು ಹೊಂದಿರುತ್ತಾನೆ ಎಂಬುದನ್ನು ಈಗ ನೋಡೋಣ. ಪ್ರಾಪಂಚಿಕ ಜೀವನವೆಲ್ಲವೂ ಚಿಂತೆಗಳಿಂದ ಕೂಡಿರುತ್ತದೆ. ಏಕೆಂದರೆ ಯಾವುದು ಸತ್ಯ? ಯಾವುದು ನಿತ್ಯ? ಸುಖವೆಂದರೇನು? ಸಂತೋಷವೆಂದರೇನು? ಆನಂದವೆಂದರೇನು? ಎಂಬ ವಿಚಾರಣೆ ಇಲ್ಲದೆ ಯಾವಾಗಲೂ ಚಿಂತೆಯಲ್ಲೇ ಇರುತ್ತಾರೆ. ಅದರಿಂದ ಹೊರಬರಬೇಕೆಂದರೆ ವಿವೇಕದಿಂದ ಆಲೋಚಿಸಬೇಕು.

ಮಾನವನು ಎಷ್ಟು ಹಣ ಸಂಪಾದಿಸಿದರೂ, ಎಷ್ಟೇ ಪದವಿಗಳಿದ್ದರೂ, ಎಷ್ಟೇ ಡಿಗ್ರಿಗಳನ್ನು ಗಳಿಸಿದರೂ ತನ್ನ ಜೀವನದಲ್ಲಿ ಯಾವುದು ನಿತ್ಯ ಎಂಬುದು ತಿಳಿಯದೆ ಯಾವಾಗಲೂ ಚಿಂತೆಯಲ್ಲೇ ಜೀವಿಸುತ್ತಾ, ಅನಿತ್ಯವಾದವುಗಳಿಗಾಗಿ ಹಾತೊರೆಯುತ್ತಾ ತೊಳಲಾಡುತ್ತಾ ಜೀವನವನ್ನೆಲ್ಲಾ ವ್ಯರ್ಥ ಮಾಡಿಕೊಳ್ಳುತ್ತಾನೆ.

ಪ್ರಾಪಂಚಿಕ ಜೀವನದಲ್ಲಿ ಎಲ್ಲರ ದೃಷ್ಟಿ ಹಣ ಸಂಪಾದನೆಯ ಮೇಲೆಯೇ ಇರುತ್ತದೆ. ಆಧ್ಯಾತ್ಮಿಕ ಜೀವನದಲ್ಲಿಯೂ ಹಣದ ಮೇಲೆ ಆಸೆ ಇರುತ್ತದೆ, ಆದರೆ ಈ ಶರೀರ ಶಾಶ್ವತವಲ್ಲ, ಈ ಪ್ರಪಂಚ ಶಾಶ್ವತವಲ್ಲ ಎಂದು ತಿಳಿದುಕೊಂಡು ಅದರ ಮೇಲೆ ದೃಷ್ಟಿ ಕಡಿಮೆ ಮಾಡುತ್ತಾರೆ. ಮಾನವನಿಗಿರುವ ಆಸೆಗಳು ಈ ಜನ್ಮದವಲ್ಲ, ಅವು ಜನ್ಮ ಜನ್ಮಾಂತರಗಳ ಸಂಸ್ಕಾರಗಳು. ಭಗವಂತನ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದೆ ಆಸೆಗಳು ಪ್ರಾಪಂಚಿಕ ಜೀವನದಲ್ಲಿರುವವರು ದೈವವು ಎಲ್ಲವನ್ನೂ ನೀಡುವವನು ಎಂದು ನಂಬುತ್ತಾರೆ. ಈ ಪ್ರಪಂಚದಲ್ಲಿ ಮುಕ್ಕಾಲು ಭಾಗದಷ್ಟು ಮನುಷ್ಯರು ಹೀಗೆಯೇ ಇದ್ದಾರೆ. ಎಷ್ಟು ಸಂಪಾದಿಸಿದರೂ ಜೀವನದಲ್ಲಿ ತೃಪ್ತಿ ಇಲ್ಲದೆ ಬದುಕುತ್ತಿದ್ದಾರೆ. ತಮ್ಮ ಆಸೆಗಳನ್ನು ಪೂರೈಸಬೇಕೆಂದು ಕೇಳಿಕೊಳ್ಳುತ್ತಾರೆ. ಅವರ ಪೂರ್ವ ಜನ್ಮದ

ಪುಣ್ಯದಿಂದಾಗಲಿ ಅಥವಾ ಅದೃಷ್ಟದಿಂದಾಗಲಿ ಆ ಆಸೆಗಳು ಈಡೇರಿದರೂ ಸಹ, ಅವರು ತೃಪ್ತಿಯಿಲ್ಲದೆ ಬದುಕುತ್ತಿರುತ್ತಾರೆ.

ಈ ರೀತಿಯಾಗಿ ಮನುಷ್ಯನು ತನ್ನ ಅಜ್ಞಾನದಿಂದ ಸದಾ ಹಣಕ್ಕಾಗಿ ಹಾತೊರೆಯುತ್ತಿರುತ್ತಾನೆ. ಅತಿ ಕಷ್ಟಪಟ್ಟು ಹಣ ಸಂಪಾದಿಸಿದ ನಂತರ, ಆ ಸಂಪತ್ತು ಎಲ್ಲಿ ಕೈಬಿಟ್ಟು ಹೋಗುತ್ತದೋ ಎಂಬ ಆತಂಕ ಪಡುತ್ತಾನೆ. ಆ ಸಂಪತ್ತು ಇಲ್ಲದಿದ್ದರೆ ತನ್ನ ಸುತ್ತಮುತ್ತಲಿನವರು ತನ್ನನ್ನು ಕೀಳಾಗಿ ಕಾಣುತ್ತಾರೋ ಎಂದು ಆಲೋಚಿಸುತ್ತಿರುತ್ತಾನೆ. ಆ ಸಂಪಾದನೆಗಾಗಿಯೇ ಸ್ನೇಹವನ್ನು ಕಳೆದುಕೊಳ್ಳುತ್ತಾನೆ, ಸಂಬಂಧಗಳನ್ನು ಕಳೆದುಕೊಳ್ಳುತ್ತಾನೆ, ಅಂದರೆ ಯಾರನ್ನೂ ನಂಬದ ಸ್ಥಿತಿಗೆ ಕುಸಿದುಹೋಗುತ್ತಾನೆ.

ಎಲ್ಲಿಯವರೆಗೆ ಹಣದ ಚಿಂತೆ ಇರುತ್ತದೋ, ಅಲ್ಲಿಯವರೆಗೆ ದೈವದ ಚಿಂತೆ ಇರುವುದಿಲ್ಲ. ಅವನು ಜೀವನದಲ್ಲಿ ಯಾವಾಗಲೂ ವೇದನೆಯಿಂದಲೇ ಇರುತ್ತಾನೆ. ಪ್ರಾಪಂಚಿಕ ಆಸೆಗಳು ಎಷ್ಟು ಹೆಚ್ಚುತ್ತವೋ, ಅಷ್ಟರಮಟ್ಟಿಗೆ ಜೀವನವು ಅಧೋಗತಿಗೆ ಇಳಿಯುತ್ತದೆ ಮತ್ತು ಜೀವನದಲ್ಲಿ ಎಂದಿಗೂ ಶಾಂತಿ, ಸುಖ ಇರುವುದಿಲ್ಲ.

ಪ್ರತಿಯೊಬ್ಬರಿಗೂ ಹಣದ ಅವಶ್ಯಕತೆ ಇದೆ, ಆದರೆ ಅದೇ ಜೀವನವಾಗಬಾರದು. ಆದರೆ ಮನುಷ್ಯನು ಹಣದ ಹಿಂದೆ ಬಿದ್ದು ತನ್ನ ಶಕ್ತಿಯನ್ನೆಲ್ಲ ಹಣ ಗಳಿಸುವುದಕ್ಕಾಗಿಯೇ ವ್ಯಯಿಸುತ್ತಾ ತನ್ನ ಜೀವನವನ್ನೇ ಧಾರೆ ಎರೆಯುತ್ತಿದ್ದಾನೆ. ಅನಂತ ಶಕ್ತಿಯನ್ನು ಹೊಂದಿರುವ ಮನುಷ್ಯನು, ನಶಿಸಿಹೋಗುವ ಈ ಪ್ರಪಂಚವನ್ನೇ ನೋಡುತ್ತಾ... ಎಲ್ಲರೂ ನನ್ನನ್ನು ಹೊಗಳಬೇಕು, ಶರೀರವನ್ನು ಸುಖವಾಗಿಡಬೇಕು, ಬಂಧುಗಳಲ್ಲಿ ತಾನು ದೊಡ್ಡವನಾಗಿರಬೇಕು ಮತ್ತು ತನ್ನ ಮಕ್ಕಳು ಮಹಾರಾಜರಂತೆ ಬದುಕಬೇಕು ಎಂಬ ಇಂತಹ ಆಸೆಗಳಿಂದ ಪ್ರತಿನಿತ್ಯವೂ ಶಾಂತಿ ಇಲ್ಲದೆ ಬದುಕುತ್ತಿದ್ದಾನೆ.

ಪ್ರಾಪಂಚಿಕ ಚಿಂತನೆಯುಳ್ಳ ಮನುಷ್ಯನಿಗೆ ಕಾಲ ಕೂಡಿ ಬರದಿದ್ದಾಗ ಅಂದರೆ ಕಳೆದ ಜನ್ಮದಲ್ಲಿ ಪುಣ್ಯ ಕರ್ಮಗಳು ಇಲ್ಲದಿದ್ದಾಗ, ಎಷ್ಟೇ ಪ್ರಯತ್ನಿಸಿದರೂ ಅವನಿಗೆ ಅದೃಷ್ಟ ಒಲಿಯುವುದಿಲ್ಲ. ಅಂತಹ ಸಮಯದಲ್ಲಿ ತಾನು ಅಂದುಕೊಂಡಿದ್ದನ್ನು ಸಾಧಿಸಲಾಗದೆ ಅನೇಕ ದುರ್ಗುಣಗಳಿಗೆ ದಾಸನಾಗುತ್ತಾನೆ.

ನೀವು ಗಮನಿಸಿದರೆ, ಕೆಲವು ಮನುಷ್ಯರು ತಾವು ಅಂದುಕೊಂಡಿದ್ದನ್ನು ಮಾಡಲಾಗದಿದ್ದಾಗ ಆ ವೇದನೆಯನ್ನು ತಡೆದುಕೊಳ್ಳಲಾರದೆ ಮದ್ಯಪಾನಕ್ಕೆ ದಾಸರಾಗುತ್ತಾರೆ. ಅಂತಹವರು ತಮ್ಮ ಆರೋಗ್ಯವನ್ನು ಹಾಳುಮಾಡಿಕೊಳ್ಳುವುದಲ್ಲದೆ, ತಮ್ಮ ಸಂಸಾರದಲ್ಲಿನ ಹೆಂಡತಿ ಮತ್ತು ಮಕ್ಕಳನ್ನು ಬಹಳ ಕಷ್ಟಪಡಿಸುತ್ತಾರೆ.

ಭಾಗವತದಲ್ಲಿ ಕೂಡ ಮದ್ಯಪಾನ ಎನ್ನುವುದು ಕೇವಲ ಪಾಪವಲ್ಲ, ಅದು ಮಹಾಪಾಪ ಎಂದು ಹೇಳಲಾಗಿದೆ. ಈ ಆಧ್ಯಾತ್ಮಿಕ ಜೀವನಕ್ಕೆ ಬಂದವರು ಅಂತಹ

ಕೆಲಸ ಮಾಡಿದರೆ ಎಷ್ಟೋ ಪಾಪ ಮಾಡಿದಂತಾಗುತ್ತದೆ.

ಜೀವನದಲ್ಲಿ ಕಷ್ಟಗಳು, ವೇದನೆಯನ್ನು ತಡೆದುಕೊಳ್ಳಲಾರದೆ ಒತ್ತಡಕ್ಕೆ ಒಳಗಾಗುವವನನ್ನು ನೋಡಿ, ಅವನ ಗೆಳೆಯರು "ಮದ್ಯಪಾನ ಮಾಡಿದರೆ ನೋವುಗಳೆಲ್ಲಾ ಮರೆಯಾಗುತ್ತವೆ" ಎಂದು ಅವನಿಗೆ ಅಭ್ಯಾಸ ಮಾಡಿಸುತ್ತಾರೆ. ಇಂತಹ ಸ್ನೇಹಿತರು ಇದ್ದರೆ ಅವನು ಜೀವನದಲ್ಲಿ ಬಹಳಷ್ಟು ನಷ್ಟ ಹೊಂದುತ್ತಾನೆ. ಅದಕ್ಕಾಗಿಯೇ ಸಾಧಕನಿಗೆ 'ಸಜ್ಜನರ ಸಹವಾಸ' ಇರಬೇಕೆಂದು ಗುರುಗಳು ಯಾವಾಗಲೂ ಹೇಳುತ್ತಿರುತ್ತಾರೆ. ಕೆಟ್ಟವರ ಜೊತೆ ಸ್ನೇಹ ಬೆಳೆಸಿದರೆ ಕೆಟ್ಟ ಅಭ್ಯಾಸಗಳು ಮತ್ತು ಕೆಟ್ಟ ಆಲೋಚನೆಗಳು ಅಂಟಿಕೊಳ್ಳುತ್ತವೆ. ನೀವು ಗಮನಿಸಿ, ಕೃಷ್ಣನ ಸಹವಾಸ ಮಾಡಿ ಕಷ್ಟಗಳನ್ನು ಸಹಿಸಿಕೊಂಡು ಪಾಂಡವರು ವಿಜಯವನ್ನು ಸಾಧಿಸಿದರೆ, ಶಕುನಿಯ ಸಹವಾಸ ಮಾಡಿ ಅರಮನೆಯಲ್ಲಿ ಇದ್ದರೂ ನಿದ್ದೆ ಮಾಡಲಾಗದೆ, ಸುಖಭೋಗಗಳನ್ನು ಅನುಭವಿಸಲಾಗದೆ ಯಾವಾಗಲೂ ಚಿಂತೆಯಲ್ಲಿಯೇ ಇದ್ದನು ದುರ್ಯೋಧನ. ಧರ್ಮರಾಜನು "ಭಾವ (ಕೃಷ್ಣ) ನನ್ನ ಪಕ್ಕದಲ್ಲಿ ಇದ್ದಾನೆ, ನನ್ನನ್ನು ಕಾಪಾಡಬಲ್ಲ" ಎಂದು ನಿಶ್ಚಿಂತೆಯಿಂದ ಇದ್ದನು. "ಸಜ್ಜನರ ಸಹವಾಸ ನಮಗೆ ನೆಮ್ಮದಿ ನೀಡುತ್ತದೆ, ದುರ್ಜನರ ಸಹವಾಸ ಯಾವಾಗಲೂ ಚಿಂತೆಯನ್ನು ತರುತ್ತದೆ."

ಅಸಲಿಗೆ ಚಿಂತೆಗೆ ಕಾರಣವೇನು? ಎಂದು ಯಾರಿಗೆ ಅವರೇ ವಿಚಾರ ಮಾಡಿಕೊಂಡರೆ, ನಾನು ಪ್ರಪಂಚದ ಕಡೆಗೆ ಹೋದಾಗ ಚಿಂತೆಗಳು ಬರುತ್ತಿವೆ...

"ಯಾವಾಗ ನಾನು ನನ್ನಲ್ಲಿ ಇರುವುದರೊಂದಿಗೆ ತೃಪ್ತಿಪಡುತ್ತೇನೋ, ಆಗ ನನಗೆ ನಿಶ್ಚಿಂತೆಯಾದ ಜೀವನ ಸಿಗುತ್ತದೆ" ಎಂದು ಅವರು ಅರಿತುಕೊಳ್ಳುತ್ತಾರೆ.

"ತೃಪ್ತಿ ಇಲ್ಲದ ಜೀವನ ಯಾವಾಗಲೂ ಚಿಂತೆ, ತೃಪ್ತಿ ಇರುವ ಜೀವನ ಯಾವಾಗಲೂ ನಿಶ್ಚಿಂತೆ". ಭಗವಂತನು ಯಾರಿಗೆ ಎಷ್ಟು ಕೊಡಬೇಕೋ ಅದನ್ನು ಅವರ ಕಳೆದ ಜನ್ಮದ ಪುಣ್ಯಕ್ಕೆ ಅನುಗುಣವಾಗಿ ನೀಡುತ್ತಾನೆ. ಆದರೆ ನೀವು ಎಷ್ಟೇ ಪ್ರಯತ್ನಿಸಿದರೂ, ಅದಕ್ಕಾಗಿ ನಿಮ್ಮ ಜೀವನವನ್ನೇ ವ್ಯಯಿಸಿದರೂ ಫಲಿತಾಂಶ ಸಿಗದಿರಬಹುದು.

ಮಾನವನ ಜೀವನದಲ್ಲಿ ಕಷ್ಟ, ದುಃಖ ಏಕಿದೆ ಎಂದರೆ ಯಾವಾಗ ನಾವು ಕೇವಲ ಶರೀರವೇ ನಾನು ಎಂದು ಅಂದುಕೊಳ್ಳುತ್ತೇವೆಯೋ, ಈ ಪ್ರಪಂಚವು ಶಾಶ್ವತ ಎಂದು ಭಾವಿಸುತ್ತೇವೆಯೋ, ಆಗ ಯಾವಾಗಲೂ ಭಯದಿಂದ ಬದುಕುತ್ತೇವೆ. "ಲೋಕವು ಏನೆಂದುಕೊಳ್ಳುತ್ತದೆಯೋ" ಎಂಬ ಭಯದ ಮನಃಸ್ಥಿತಿಯಲ್ಲಿ ಬದುಕುತ್ತೇವೆ. ಬಂಧನಗಳಲ್ಲಿ ಬದುಕುತ್ತಾ, ಯಾವಾಗಲೂ ಶಾರೀರಿಕ ಸುಖಗಳೇ ಬೇಕು ಎಂದುಕೊಂಡು, ಅದೇ ಜೀವನವೆಂದು ಭಾವಿಸಿ ಅದಕ್ಕಾಗಿ ಹಣ ಸಂಪಾದಿಸಲು, ಪದವಿಗಳನ್ನು ಪಡೆಯಲು ಎಷ್ಟೋ ಪ್ರಯತ್ನಗಳನ್ನು ಮಾಡುತ್ತೇವೆ. ಆ ಪ್ರಯತ್ನ ವಿಫಲವಾದ ದಿನ

ದುಶ್ಚಟಗಳಿಗೆ ಬಲಿಯಾಗಿ ಇನ್ನೂ ಹೆಚ್ಚಿನ ದುಃಖದಲ್ಲಿ ಮುಳುಗುತ್ತೇವೆ. ಹೀಗೆ ಬದುಕುತ್ತಾ ಪ್ರತಿಯೊಬ್ಬರನ್ನೂ ಅನುಮಾನಿಸುತ್ತಾ, ಎಷ್ಟೋ ವೇದನೆಯನ್ನು ಅನುಭವಿಸುತ್ತಾ, ಸದಾ ಭಯ ಮತ್ತು ನೋವಿನಿಂದ ಶಾಂತಿ ಇಲ್ಲದೆ ಜೀವಿಸುತ್ತಿರುತ್ತಾರೆ.

"ನಾನು ಚೆನ್ನಾಗಿ ಹಣ ಸಂಪಾದಿಸಿದರೆ ಎಲ್ಲರೂ ನನ್ನನ್ನು ಹೊಗಳುತ್ತಾರೆ, ಎಲ್ಲರೂ ನನ್ನನ್ನು ಗೌರವಿಸುತ್ತಾರೆ" ಎಂದು ಭಾವಿಸಿ ಬೇರೆಯವರಿಗೆ ಯಾವುದೇ ಸಹಾಯ ಮಾಡದೆ ಬದುಕಿ, ಕೊನೆಗೆ ವೃದ್ಧಾಪ್ಯ ಬಂದ ಮೇಲೆ ಸ್ವಲ್ಪ ಕಾಲಕ್ಕೆ ಮರಣ ಹೊಂದುತ್ತಾರೆ. ಆಗ ಅವರ ಸುತ್ತಮುತ್ತಲಿರುವ ಬಂಧುಗಳಾಗಲಿ, ಸ್ನೇಹಿತರಾಗಲಿ ಏನೆನ್ನುತ್ತಾರೆಂದರೆ "ಜೀವನಪೂರ್ತಿ ಎಷ್ಟೋ ಶ್ರಮಪಟ್ಟು ಸಂಪಾದಿಸಿದ, ಹೋಗುವಾಗ ಏನಾದರೂ ತೆಗೆದುಕೊಂಡು ಹೋದನಾ?" ಎಂದರೆ, ಇಲ್ಲ; ಹಣವನ್ನೂ ತೆಗೆದುಕೊಂಡು ಹೋಗಲಿಲ್ಲ, ಪದವಿಗಳನ್ನೂ ತೆಗೆದುಕೊಂಡು ಹೋಗಲಿಲ್ಲ. ಬದುಕಿದ್ದಾಗ ಒಬ್ಬರಿಗೂ ಸಹಾಯ ಮಾಡಲಿಲ್ಲ, ಒಂದು ಒಳ್ಳೆಯ ಕೆಲಸವನ್ನೂ ಮಾಡಲಿಲ್ಲ ಎಂದು ಅಂದುಕೊಳ್ಳುತ್ತಾರೆ. ಅದಕ್ಕೇ ಲೌಕಿಕ ಜೀವನದಲ್ಲಿ ಓಡುವವರಿಗೆ ಕೊನೆಗೆ ಅಪವಾದಗಳೇ ಹೊರತು ಆಶೀರ್ವಾದಗಳು ಬರುವುದಿಲ್ಲ ಎಂದು ಗ್ರಹಿಸಬೇಕು.

ಈ ಧ್ಯಾನ ಮಾರ್ಗಕ್ಕೆ ಬಂದ ಕೆಲವರಿಗೆ ಇನ್ನೂ ವಾಸನೆಗಳು (ಹಳೆಯ ಸಂಸ್ಕಾರಗಳು) ಮತ್ತು ಲೌಕಿಕ ಚಿಂತೆಗಳು ಇರುತ್ತವೆ. ಹಣದ ಮೇಲೆ ಅಥವಾ ಅಧಿಕಾರದ ಮೇಲೆ ಆಸೆ ಇಲ್ಲದಿದ್ದರೂ, ಹೊರಗಡೆ ಹೋಗಿ ಕ್ಲಾಸ್ (ಪಾಠ) ಮಾಡಿದಾಗ ಎಲ್ಲರೂ ನನ್ನನ್ನು ಹೊಗಳಬೇಕು, ಮೆಚ್ಚಿಕೊಳ್ಳಬೇಕು ಎಂಬ ಹಂಬಲ ಇರುತ್ತದೆ. ಆದರೆ ನೀವು ಸತ್ಯವನ್ನು ಹೇಳಿದಾಗ ಜಗತ್ತು ನಿಮ್ಮ ಹಿಂದೆ ಬೀಳುತ್ತದೆ, ಅದೇ ಅಸತ್ಯವನ್ನು ಹೇಳಿದಾಗ ಅನೇಕ ವಿಮರ್ಶೆಗಳು ಎದುರಾಗುತ್ತವೆ.

ಸತ್ಯವನ್ನು ಬೋಧಿಸಿದಾಗ ನಿಮ್ಮ ಎದುರಿಗೆ ಮೆಚ್ಚದಿದ್ದರೂ, ಬೆನ್ನ ಹಿಂದೆ ಹೊಗಳುತ್ತಾರೆ. ನೀವು ಸತ್ಯದಲ್ಲಿ ಬದುಕುತ್ತಿದ್ದರೆ, ಲೋಕಕ್ಕಾಗಿ ಅಲ್ಲದೆ ಪರಮಾತ್ಮನಿಗಾಗಿ ಕೆಲಸ ಮಾಡುತ್ತೀರಿ. ಆಗಲೇ ನೀವು ಆ ಪರಮಾತ್ಮನಿಗೆ ಇಷ್ಟವಾಗುತ್ತೀರಿ. ಇದನ್ನೇ ಭಗವದ್ಗೀತೆ ಮತ್ತು ಉಪನಿಷತ್ತುಗಳಲ್ಲಿ ಹೇಳಲಾಗಿದೆ. ಲೌಕಿಕ ಜೀವನವೇ ಶಾಶ್ವತ ಎಂದು ನಂಬುವವನು ಅಜ್ಞಾನಿ. ಪರಮಾತ್ಮನ ಕಡೆಗೆ ತಿರುಗಿ, ಆತನೇ ಶಾಶ್ವತ ಎಂದು ತಿಳಿದುಕೊಳ್ಳುವವನೇ ಜ್ಞಾನಿ. ಅದಕ್ಕಾಗಿಯೇ ಪ್ರತಿಯೊಬ್ಬರನ್ನು ಅಜ್ಞಾನದಿಂದ ಜ್ಞಾನದ ಕಡೆಗೆ ತಿರುಗಿಸಬೇಕು. ಇದಕ್ಕಿಂತ ಮೀರಿದ ಪುಣ್ಯ ಕಾರ್ಯ ಈ ಭೂಮಿಯ ಮೇಲೆ ಬೇರೆ ಯಾವುದೂ ಇಲ್ಲ ಎಂದು ಉಪನಿಷತ್ತುಗಳಲ್ಲಿ ಹೇಳಲಾಗಿದೆ.

ಅದಕ್ಕಾಗಿಯೇ ಪತ್ರೀಜಿಯವರು ನಮ್ಮಿಂದ ಕೇವಲ ಧ್ಯಾನ ಮಾಡಿಸುವುದು ಮಾತ್ರವಲ್ಲದೆ, ಧ್ಯಾನ ಪ್ರಚಾರವನ್ನೂ ಮಾಡಿಸುತ್ತಿದ್ದಾರೆ. ಏಕೆಂದರೆ ಈ ಭೂಮಿಯ

ಮೇಲೆ ಮಾಡುವ ಎಲ್ಲಾ ಪುಣ್ಯ ಕರ್ಮಗಳಿಗಿಂತ ಮನುಷ್ಯನನ್ನು ಜ್ಞಾನಿಯನ್ನಾಗಿ ಮಾಡುವುದೇ ಅತ್ಯಂತ ದೊಡ್ಡ ಪುಣ್ಯ ಕಾರ್ಯ.

"ನಾನು ಜೀವನು, ಜೀವಂತವಾಗಿ ಇರುವವನೇ ಜೀವ, ನನಗೆ ಮರಣವಿಲ್ಲ" ಎಂದು ತಿಳಿದುಕೊಂಡವನೇ ದೇವರು. ಶರೀರ ಹೋದರೂ ನಾನು ಇರುತ್ತೇನೆ, ನಾನು ಶಾಶ್ವತ ಎಂದು ಭಾವಿಸುವ ಜ್ಞಾನಿಯೇ ದೇವರಾಗುತ್ತಾನೆ.

ಆದರೆ ಲೌಕಿಕ ಮನುಷ್ಯ ಯಾವಾಗಲೂ ಈ ಜಗತ್ತು ನನ್ನನ್ನು ಹೊಗಳಬೇಕು, ಈ ಶರೀರ ಶಾಶ್ವತ, ಈ ಶರೀರ ಇರುವಾಗಲೇ ನಾನು ಕೀರ್ತಿ–ಪ್ರತಿಷ್ಠೆ ಹಾಗೂ ಆಸ್ತಿ–ಪಾಸ್ತಿಗಳನ್ನು ಸಂಪಾದಿಸಬೇಕು ಎಂದು ಅಂದುಕೊಳ್ಳುತ್ತಾನೆ.

ಈ ಲೌಕಿಕ ಜೀವನದಲ್ಲಿ ಆಸೆಗಳು ಎಷ್ಟಿರುತ್ತವೆಯೋ, ಅಷ್ಟೇ ಭಯವೂ ಇರುತ್ತದೆ. ಅವನು ಸಂಪಾದಿಸಿದ ಹಣವನ್ನು ಮಕ್ಕಳು ಎಲ್ಲಿ ಖರ್ಚು ಮಾಡುತ್ತಾರೋ ಎಂಬ ಭಯ, ನನ್ನ ಹತ್ತಿರವಿರುವ ಹಣವನ್ನು ನೋಡಿ ಎಲ್ಲರೂ ಸಾಲ ಕೇಳುತ್ತಾರೋ ಎಂಬ ಭಯದಲ್ಲಿ ಬದುಕುತ್ತಿರುತ್ತಾನೆ. ಈ ಭಯಗಳು ಯಾವಾಗ ಹೋಗುತ್ತವೆ ಎಂದರೆ, ಆ ಭಗವಂತನು ಮೆಚ್ಚುವಂತೆ ಬದುಕಬೇಕು, ಜನರು ಏನೇ ಅಂದುಕೊಂಡರೂ ಪರವಾಗಿಲ್ಲ ಆದರೆ ಲೋಕೇಶ್ವರನು ಮೆಚ್ಚುವಂತೆ ಬದುಕಬೇಕು ಎಂದು ಅಂದುಕೊಂಡಾಗ ಪ್ರಾಪಂಚಿಕ ಜೀವನದ ಚಿಂತೆಗಳನ್ನೆಲ್ಲಾ ಬಿಟ್ಟು ನಿಶ್ಚಿಂತೆಯಿಂದ ಬದುಕಬಹುದು. ಪ್ರಾಪಂಚಿಕ ಜೀವನದಲ್ಲಿ ತೃಪ್ತಿಯಿಂದ ಬದುಕುತ್ತಾ ಆ ಭಗವಂತನ ಬಗ್ಗೆ ತಿಳಿದುಕೊಳ್ಳುತ್ತಾ, ನಿಮ್ಮಲ್ಲಿ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. "ನಾನು ಕೇವಲ ಜೀವಿಯಲ್ಲ, ಈ ಶರೀರವೆಂಬ ಉಡುಪನ್ನು ಧರಿಸಿ ಈ ಭೂಮಿಯ ಮೇಲೆ ಬಂದ ಭಗವಂತನೇ ನಾನು. ಯಾವ ಜನ್ಮದಲ್ಲಿ ಪುಣ್ಯ ಮಾಡಿದ್ದೆನೋ ಏನೋ, ಈ ಜನ್ಮದಲ್ಲಿ ಪರಮಾತ್ಮನ ರೂಪದಲ್ಲಿ ಒಬ್ಬ ಸದ್ಗುರುವು ನನ್ನ ಜೀವನಕ್ಕೆ ಬಂದು ಈ ಸತ್ಯವನ್ನು ಬೋಧಿಸಿದರು" ಎಂದು ತಿಳಿದುಕೊಳ್ಳುತ್ತಾರೆ.

ಈ ಭೂಮಿಯ ಮೇಲೆ ಮನುಷ್ಯನು ಮಾತ್ರವೇ ಸಾಧನೆ ಮಾಡಿ ತಾನು ಯಾರು, ಈ ಸೃಷ್ಟಿ ಎಂದರೇನು ಎಂದು ತಿಳಿದುಕೊಳ್ಳಬಲ್ಲನು. ಸಾಧನೆ ಮಾಡದ ಮನುಷ್ಯನು ಗಾಢ ನಿದ್ರೆಯಲ್ಲಿರುವ ಜೀವಿಯಂತೆ ಜೀವಿಸುತ್ತಿರುತ್ತಾನೆ.

ಗಾಢ ನಿದ್ರೆಯಲ್ಲಿರುವಾಗ ನಿಮಗೆ ಪ್ರಪಂಚವೆಂದರೆ ಏನೆಂದು ತಿಳಿಯುವುದಿಲ್ಲ, ನಿಮ್ಮ ಪಕ್ಕದಲ್ಲಿ ಯಾರಿದ್ದಾರೆಂದು ತಿಳಿಯುವುದಿಲ್ಲ, ನೀವು ಎಲ್ಲಿದ್ದೀರಿ ಎಂದೂ ತಿಳಿಯುವುದಿಲ್ಲ. ಈಗ ನೀವು ಕೂಡ ಹಾಗೆಯೇ ಇದ್ದೀರಿ. ನಿಮಗೆ ಥರ್ಡ್ ಐ (ಮೂರನೇ ಕಣ್ಣು) ಇಲ್ಲ, ಬೇರೆ ಲೋಕಗಳನ್ನು ನೋಡಿಲ್ಲ, ಆ ಕಾರಣದಿಂದ ಅವುಗಳೇ ಇಲ್ಲ ಅಂದುಕೊಳ್ಳುವುದೇ ದೊಡ್ಡ ಅಜ್ಞಾನ.

ಅದಕ್ಕಾಗಿಯೇ ಸದ್ಗುರುಗಳು ಬಂದು ನೀನು ಈ ಭೂಲೋಕ ಶಾಶ್ವತ ಎಂದು ಕೊಳ್ಳುತ್ತಿದ್ದೀಯಾ, ನಿನ್ನ ಶರೀರ ಶಾಶ್ವತ ಎಂದುಕೊಳ್ಳುತ್ತಿದ್ದೀಯಾ, ಆದರೆ ಇದಕ್ಕಿಂತಲೂ ಮಿಗಿಲಾದ ಕೋಟಿ ಕೋಟಿ ಲೋಕಗಳಿವೆ. ಅವುಗಳನ್ನು ನೀನು ದೇಹದಲ್ಲಿ ರುವಾಗಲೇ ನೋಡಬಹುದು, ಅದಕ್ಕೆ ಧ್ಯಾನವೆಂಬ ಪ್ರಾಕ್ಟೀಸ್ (ಅಭ್ಯಾಸ) ಬೇಕು. ಧ್ಯಾನದ ಅಭ್ಯಾಸ ಮಾಡಿದಾಗ ನಿನ್ನ ಮೂರನೇ ಕಣ್ಣು ಜಾಗೃತವಾಗುತ್ತದೆ. ಈ ದೇಹವಿರುವಾಗಲೇ ನೀನು ಎಲ್ಲಾ ಲೋಕಗಳನ್ನು ನೋಡಬಹುದು" ಎಂದು ನಿಮಗೆ ತಿಳಿಸುತ್ತಾರೆ.

ಮಹಾನ್ ಪುರುಷರು ಎಷ್ಟೋ ಪುಸ್ತಕಗಳನ್ನು ಬರೆದು ನಿಮ್ಮ ಮುಂದೆ ಇಟ್ಟಿದ್ದಾರೆ. ಅವುಗಳನ್ನೆಲ್ಲಾ ಸ್ವಾಧ್ಯಾಯ (ಸ್ವಯಂ ಅಧ್ಯಯನ) ಮಾಡುತ್ತಾ, ಗುರುಗಳು ಹೇಳಿದಂತೆ ಧ್ಯಾನ ಮಾಡಿದರೆ, ಗುರುಗಳು ಹೇಳಿದ್ದು ಸತ್ಯಜ್ಞಾನವೆಂದು ನಿಮಗೆ ಅರ್ಥವಾಗುತ್ತದೆ. ಆಗ ಪ್ರಾಪಂಚಿಕ ಜೀವನವು ನಿಶ್ಚಿಂತೆಯಿಂದ ಇರುತ್ತದೆ. ಅದಕ್ಕಾಗಿಯೇ ಪ್ರಾಪಂಚಿಕ ಜೀವನದಲ್ಲಿ ಚಿಂತೆ ಏಕೆ ಇದೆ? ಅಂದರೆ, ಎಲ್ಲವೂ ಬೇಕು ಎಂದು ಬಯಸುವವನಿಗೆ ಚಿಂತೆ; ಇರುವುದರಲ್ಲಿ ತೃಪ್ತಿ ಪಡುವವನಿಗೆ ನಿಶ್ಚಿಂತೆ.

ಹಣದ ಮೇಲಿನ ವ್ಯಾಮೋಹವನ್ನು ಬಿಟ್ಟು ದೇವರ ಮೇಲೆ ವ್ಯಾಮೋಹವನ್ನು ಬೆಳೆಸಿಕೊಂಡವನು ಯಾವಾಗಲೂ ನಿಶ್ಚಿಂತೆಯಿಂದ ಇರುತ್ತಾನೆ. ನಿಮ್ಮಲ್ಲಿ ಆತ್ಮದ ಮೇಲೆ ಪ್ರೀತಿ ಎಷ್ಟು ಹೆಚ್ಚಾಗುತ್ತದೋ, ಪ್ರಾಪಂಚಿಕ ಜೀವನದಲ್ಲಿ ಅಷ್ಟು ತೃಪ್ತಿ ಇರುತ್ತದೆ. ನೀವು ಬಯಸಿದ್ದು ಸಿಕ್ಕಿದರೂ ಅಥವಾ ಸಿಗದಿದ್ದರೂ ತೃಪ್ತಿಯೇ ಇರುತ್ತದೆ. "ನನಗೆ ಇಂದು ಏನು ನೀಡಬೇಕು ಅಥವಾ ನೀಡಬಾರದು ಎಂಬುದು ಭಗವಂತನಿಗೆ ತಿಳಿದಿದೆ. ನೀಡಲಿಲ್ಲ ಎಂದರೆ ನನಗೆ ಅದರ ಅವಶ್ಯಕತೆಯಿಲ್ಲ" ಎಂಬ ತೃಪ್ತಿಯೊಂದಿಗೆ ಬದುಕಲು ಸಾಧ್ಯವಾಗುತ್ತದೆ. "ಚಿಂತೆಯನ್ನು ಬಿಟ್ಟು ನಿಶ್ಚಿಂತೆಯಿಂದ ಬದುಕಬೇಕೆಂದರೆ ಜ್ಞಾನವನ್ನು ಬೆಳೆಸಿಕೊಳ್ಳಬೇಕು". ಪ್ರತಿಯೊಬ್ಬರನ್ನು ಧ್ಯಾನಿಯಾಗಿ ರೂಪಿಸುವುದೇ ಈ ಭೂಮಿಯ ಮೇಲೆ ಎಲ್ಲಕ್ಕಿಂತ ದೊಡ್ಡ ಪುಣ್ಯದ ಕೆಲಸ.

ಅಂತರಂಗದ ಸಂಕೇತಗಳು ಯಾರಿಗೆ ಕೇಳಿಸುತ್ತವೆ?

ಯಾರಿಗೆ ಅಂತರಂಗದ ಕರೆ ಕೇಳಿಸುತ್ತದೆ? ಯಾರಿಗೆ ಅಂತರಂಗದಿಂದ ಸಂಕೇತಗಳು ಕೇಳಿಸುತ್ತವೆ? ಎಂಬುದನ್ನು ತಿಳಿದುಕೊಳ್ಳೋಣ. ಏಕೆಂದರೆ ನೀವೆಲ್ಲರೂ ಈ ಧ್ಯಾನ ಮಾರ್ಗಕ್ಕೆ ಬಂದಿದ್ದೀರಿ, ಧ್ಯಾನ ಮಾಡುತ್ತಿದ್ದೀರಿ, ಜ್ಞಾನವನ್ನು ಆಲಿಸುತ್ತಿದ್ದೀರಿ ಮತ್ತು ಉತ್ತಮವಾಗಿ ಜೀವನ ನಡೆಸುತ್ತಿದ್ದೀರಿ. ಆದರೆ ಇದೇ ವಿಷಯವನ್ನು ಇತರರಿಗೆ ಹೇಳಿದರೆ ಅವರು ಕೇಳುವುದಿಲ್ಲ, ಏಕೆ ಕೇಳುವುದಿಲ್ಲ? ಎಂಬ ವಿಷಯವನ್ನು ತಿಳಿದುಕೊಳ್ಳೋಣ.

ನೀವೆಲ್ಲರೂ ಗುರುವಿನ ಬಳಿಗೆ ಬಂದು ಎಷ್ಟೋ ಜ್ಞಾನವನ್ನು ತಿಳಿದುಕೊಳ್ಳುತ್ತಾ,

ನಿಮಗಿರುವ ಸಂದೇಹಗಳನ್ನೆಲ್ಲಾ ನಿವಾರಿಸಿಕೊಳ್ಳುತ್ತಿದ್ದರೆ ನಿಮ್ಮ ಮನಸ್ಸು ಪರಿಪೂರ್ಣತೆಯನ್ನು ಪಡೆಯುತ್ತದೆ. ಈ ಮಾರ್ಗಕ್ಕೆ ಬಂದ ನೀವು ದೇಹ ಎಂಬ ಭ್ರಾಂತಿಯನ್ನು ತೊರೆದು, ನೀವು 'ಆತ್ಮ' ಎಂದು ತಿಳಿದುಕೊಂಡಿದ್ದೀರಿ. ಆದರೆ ನಿಮ್ಮ ಮನಸ್ಸಿನ ಪ್ರಭಾವದಿಂದಾಗಿ ಕೆಲವೊಮ್ಮೆ ಕೆಲವು ವಿಷಯಗಳನ್ನು ಅರ್ಥಮಾಡಿಕೊಳ್ಳಲಾಗದೆ ಸಂಕಟ ಪಡುತ್ತಿರುತ್ತೀರಿ.

ಈ ಪ್ರಾಪಂಚಿಕ ಜೀವನದಲ್ಲಿ ಎಷ್ಟೇ ಸುಖ-ಭೋಗಗಳನ್ನು ಅನುಭವಿಸಿದರೂ ಆನಂದ ಸಿಗದೆ, ಅವುಗಳ ಮೇಲೆ ವಿರಕ್ತಿ ಉಂಟಾಗಿ ಯಾವುದೋ ಒಂದು ಸಂದರ್ಭದಲ್ಲಿ ಆಧ್ಯಾತ್ಮಿಕ ಮಾರ್ಗಕ್ಕೆ ಬರುತ್ತಾರೆ. ಹಾಗೆ ಬಂದವರು ಮೊದಮೊದಲು "ನಾನು ನನ್ನ ಸ್ನೇಹಿತರ ಕಾರಣದಿಂದ ಈ ಮಾರ್ಗಕ್ಕೆ ಬಂದೆ, ಅನಾರೋಗ್ಯದ ಸಮಸ್ಯೆಗಳಿಂದ ಬಂದೆ, ನನ್ನ ಕಷ್ಟಗಳನ್ನು ಪರಿಹರಿಸಿಕೊಳ್ಳಲು ಬಂದೆ" ಎಂದು ಅಂದುಕೊಳ್ಳುತ್ತಾರೆ. ಆದರೆ ಪ್ರತಿಯೊಬ್ಬರಿಗೂ ಆತ್ಮದಿಂದ ಒಂದು ಸಂಕೇತ ತಲುಪುತ್ತದೆ, ಅಂತಹವರು ಮಾತ್ರ ಈ ಮಾರ್ಗಕ್ಕೆ ಬರುತ್ತಾರೆ.

ನನ್ನ ವಿಷಯವನ್ನೇ ತೆಗೆದುಕೊಂಡರೆ, ನಾನು ನನ್ನ ಜೀವನದಲ್ಲಿ ಧ್ಯಾನ ಮಾರ್ಗಕ್ಕೆ ಬರಬಾರದು, ನಾನು ಧ್ಯಾನ ಮಾಡಬಾರದು ಎಂದು ಅಂದುಕೊಂಡಿದ್ದೆ. ಆದರೆ ನನಗೆ ಒಂದು ಕಷ್ಟ ಬಂದಾಗ ರಾಘವರಾವ್ ಅವರು "ನನ್ನ ಮಾತು ಕೇಳಿ ಒಂದು ಬಾರಿ ಧ್ಯಾನ ಮಾಡಿದರೆ ನಷ್ಟವೇನು? ಧ್ಯಾನ ಮಾಡಿ ನೋಡು" ಎಂದು ಹೇಳಿದರು. ಆಗ ನಾನು ಸರಿ, ಒಂದು ಬಾರಿ ಧ್ಯಾನ ಮಾಡಿ ನೋಡೋಣ ಎಂದು ಅಂದುಕೊಂಡೆ ಎಂದರೆ ಅದು ಆತ್ಮದಿಂದ ಬಂದ ಕರೆ ಮನಸ್ಸಿಗೆ ಬಂದ ಸಂಕೇತವೇ ಅಲ್ಲವೇ?

ಈ ಪ್ರಾಪಂಚಿಕ ಜೀವನದಲ್ಲಿ ಬೇಸರ ಬಂದು ಆಧ್ಯಾತ್ಮಿಕ ಮಾರ್ಗಕ್ಕೆ ಬರಬೇಕು ಎಂದು ಕೆಲವು ಜನರಿಗೆ ಮಾತ್ರ ಅನಿಸುತ್ತದೆ. ನಮಗೆ ಎಷ್ಟೋ ಸಂಪತ್ತಿದೆ, ಉತ್ತಮ ಮಕ್ಕಳಿದ್ದಾರೆ. ರಾಘವರಾವ್ ಅವರಿಗೆ ಎಷ್ಟೋ ಪದವಿಗಳಿದ್ದವು, ಆದರೂ ಅವರಿಗೆ

ಜೀವನದಲ್ಲಿ ತೃಪ್ತಿ ಸಿಗಲಿಲ್ಲ. ಇನ್ನೂ ಏನೋ ತಿಳಿದುಕೊಳ್ಳಬೇಕಿದೆ ಎನ್ನುವ ಅಂತರಂಗದ ಮಥನ ಅವರಲ್ಲಿತ್ತು. ಅವರು ಹೆಚ್ಚು ಪೂಜೆಗಳನ್ನು ಮಾಡುತ್ತಿದ್ದರು, ಗುಡಿಯನ್ನು ಕೂಡ ಕಟ್ಟಿಸಿದರೂ ಅವರಿಗೆ ತೃಪ್ತಿ ಉಂಟಾಗಲಿಲ್ಲ.

ಇನ್ನೂ ತಿಳಿದುಕೊಳ್ಳಬೇಕಾದದ್ದು ಏನೋ ಇದೆ, ಅದು ಧ್ಯಾನದ ಮೂಲಕವೇ ತಿಳಿದುಕೊಳ್ಳಲು ಸಾಧ್ಯವೆಂದು ಎಷ್ಟೋ ಮಂದಿ ಗುರುಗಳ ಬಳಿ ಹೋದರು. ಒಂದು ಬಾರಿ ಮಲಯಾಳ ಸ್ವಾಮಿಯವರ ಆಶ್ರಮಕ್ಕೆ ಹೋದಾಗ, ಅಲ್ಲಿ ಸ್ವಾಮಿಯವರ ಬಗ್ಗೆ ಒಂದು ಪುಸ್ತಕದಲ್ಲಿ ಓದಿದಾಗ "ಈ ಸ್ವಾಮಿ ಜೀವಂತವಾಗಿದ್ದಾಗ ನಾನು ಶಿಷ್ಯನಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಅಲ್ಲವೇ?" ಎಂದು ಅಂದುಕೊಂಡರಂತೆ. ಆಗಲೇ ಆ ಪರಮಾತ್ಮನು ಪತ್ರಿಜೀ ಅವರನ್ನು ನಮ್ಮ ಜೀವನಕ್ಕೆ ಕಳುಹಿಸಿಕೊಟ್ಟರು.

ಈ ಪ್ರಾಪಂಚಿಕ ಜೀವನದಲ್ಲಿ ಬದುಕುವವರಿಗೆ ಶಾಂತಿ ಎಂಬುದು ಆತ್ಮದಲ್ಲಿದೆ ಎಂಬುದು ತಿಳಿಯದು. ಎಷ್ಟೇ ಸಂಪತ್ತಿದ್ದರೂ, ಎಷ್ಟೇ ಸುಖ ಭೋಗಗಳಿದ್ದರೂ ಶಾಂತಿ ಎಂಬುದು ಪ್ರಾಪಂಚಿಕ ಜೀವನದಲ್ಲಿ ದೊರೆಯುವುದಿಲ್ಲ. ಯಾವಾಗ ನೀವು ಆಧ್ಯಾತ್ಮಿಕ

ಜೀವನಕ್ಕೆ ಬರುತ್ತೀರೋ, ನಿಮ್ಮ ಜೀವನಕ್ಕೆ ಸತ್ಯವನ್ನು ಬೋಧಿಸುವ ಒಬ್ಬ ಸದ್ಗುರು ಬರುತ್ತಾರೋ, ಆಗಲೇ ನೀವು ಜೀವನದಲ್ಲಿ ಶಾಂತಿಯನ್ನು ಪಡೆಯುತ್ತೀರಿ.

ಈ ಅಂತರಂಗದ ಮಥನ ಇರುವವರಿಗೆ ಸತ್ಯವನ್ನು ಬೋಧಿಸುವ ಪುಸ್ತಕಗಳೇ ಇಷ್ಟವಾಗುತ್ತವೆ ಹೊರತು ಪುಣ್ಯ, ಪಾಪದ ಬಗ್ಗೆ ಬೋಧಿಸುವ ಪುಸ್ತಕಗಳು ಇಷ್ಟವಾಗುವುದಿಲ್ಲ. ಈಗ ನೋಡಿ, ಆತ್ಮೋದ್ಧಾರಕ್ಕೆ, ಆತ್ಮಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಮತ್ತು ಜ್ಞಾನವನ್ನು ಬೆಳೆಸಿಕೊಳ್ಳುವ ಪುಸ್ತಕಗಳೇ ನಿಮಗೆ ಇಷ್ಟವಾಗುತ್ತವೆ.

ಹಾಗೆ ಬಾಹ್ಯ ಜೀವನದ ಮೇಲೆ ಬೇಸರ ಉಂಟಾದಾಗ ನಿಮಗೆ ತಿಳಿಯದ ಒಂದು ವೈರಾಗ್ಯ ಬರುತ್ತದೆ. ತುಂಬ ಜನ ನೋಡಿ ಕೋಟಿ ಕೋಟಿ ಸಂಪಾದಿಸುತ್ತಾ ಇರುತ್ತಾರೆ. ಆದರೆ ತೃಪ್ತಿ ಇರುವುದಿಲ್ಲ. ಪದವಿಗಳು ಇದ್ದರೂ ಸಹ ತೃಪ್ತಿ ಇರುವುದಿಲ್ಲ. ಈ ರೀತಿ ಬಾಹ್ಯ ಪ್ರಪಂಚದಲ್ಲಿ ತೃಪ್ತಿ ಇಲ್ಲದಿದ್ದಾಗ ವೈರಾಗ್ಯ ಬರುತ್ತದೆ. ಜೀವನದಲ್ಲಿ ಬೇಕಾಗಿರುವುದು ಇದಲ್ಲ, ಬೇರೆ ಏನೋ ಇದೆ ಎಂದು ಬಾಹ್ಯ ದೃಷ್ಟಿಯಿಂದ ಅಂತರಂಗದ ದೃಷ್ಟಿಯ ಕಡೆಗೆ ಹೋಗುತ್ತಾರೆ. ಇದೇ ಅಂತರಂಗದ ಕರೆ. ಆ ಕರೆ ಆತ್ಮದಿಂದ ಮನಸ್ಸಿನ ಮೂಲಕ ನಿಮಗೆ ತಲುಪುತ್ತದೆ. ಅದಕ್ಕಾಗಿಯೇ ಮನಸ್ಸು ಎನ್ನುವುದು ಆತ್ಮವನ್ನು ಸೇರಲು ಒಂದು ಸಿಂಹದ್ವಾರ.

ತಮೋಗುಣ ಮತ್ತು ರಜೋಗುಣದಲ್ಲಿ ಇರುವವರು ಬಾಹ್ಯ ಪ್ರಪಂಚದಲ್ಲಿರುವ ಸಂತೋಷಗಳಿಗೆ ಮಾರುಹೋಗಿರುತ್ತಾರೆ. ಅಶಾಶ್ವತವಾದ ಸಣ್ಣ ಸಣ್ಣ ಸಂತೋಷಗಳಾದ ಸಂಪತ್ತು, ಸಂತಾನ, ಆಸ್ತಿಪಾಸ್ತಿಗಳನ್ನು ನೋಡಿ ಅದೇ ಜೀವನ ಎಂದುಕೊಂಡು ತೃಪ್ತಿಪಡುತ್ತಾರೆ. ಇಂತಹವರಿಗೆ ಅಂತರಂಗದ ಕರೆಯ ಅಗತ್ಯವಿರುವುದಿಲ್ಲ, ಆತ್ಮದ ಹತ್ತಿರಕ್ಕೆ ಹೋಗುವ ಅವಶ್ಯಕತೆಯೂ ಇರುವುದಿಲ್ಲ. "ಕಣ್ಣು ಮುಚ್ಚಿಕೊಂಡರೆ ಏನಾಗುತ್ತದೆ, ಈಗಲೇ ಅಲ್ಲ, ಇನ್ನೂ ಸಮಯವಿದೆ, ವೃದ್ಧಾಪ್ಯ ಬರಲಿ" ಎಂದು ಅಂದುಕೊಳ್ಳುತ್ತಾರೆ.

ಆದರೆ ಯಾರು ಸಾತ್ವಿಕ ಗುಣಕ್ಕೆ ಬರುತ್ತಾರೋ, ಅವರಿಗೆ ಪ್ರಾಪಂಚಿಕವಾಗಿ ಎಷ್ಟೇ ಸಂಪತ್ತುಗಳಿದ್ದರೂ, ಎಷ್ಟೇ ಸುಖ-ಭೋಗಗಳಿದ್ದರೂ ಜೀವನದಲ್ಲಿ ತೃಪ್ತಿ ಇರುವುದಿಲ್ಲ. ಇವರಿಗೆ ಬಾಹ್ಯ ದೃಷ್ಟಿಯನ್ನು ಬಿಟ್ಟು ಅಂತರಂಗಕ್ಕೆ ಹೋಗಬೇಕು ಎನಿಸುತ್ತದೆ. ಪ್ರಪಂಚದ ಆಕರ್ಷಣೆಗಳಿಗೆ ತೃಪ್ತಿಪಡುವವನಿಗೆ ಎಂದಿಗೂ ಅಂತರಂಗದ ದೃಷ್ಟಿ ಬರುವುದಿಲ್ಲ.

ನೋಡಿ, ಕೆಲವರು ಎಷ್ಟೋ ಪೂಜೆಗಳನ್ನು ಮಾಡುತ್ತಿರುತ್ತಾರೆ, ಆದರೆ ಅವರಿಗೆ ದೇವರು ಬಾಹ್ಯ ಪ್ರಿಯನಲ್ಲ, ಅಂತರಂಗ ಪ್ರಿಯ ಎಂಬ ವಿಷಯ ತಿಳಿಯುವುದಿಲ್ಲ. ಈ ಸೃಷ್ಟಿಯೆಲ್ಲವೂ ಆ ದೇವರದ್ದೇ ಆದಾಗ, ಆತನ ವಸ್ತುವನ್ನೇ ಆತನಿಗೆ ಅರ್ಪಿಸುತ್ತಿದ್ದೇವೆ

ಎನ್ನುವ ವಿಷಯ ತಿಳಿಯದೆ, "ಈ ದಿನ ನಾನು ಚೆನ್ನಾಗಿ ಪೂಜೆ ಮಾಡಿದೆ, ವಿವಿಧ ಹೂವುಗಳಿಂದ ಅಲಂಕರಿಸಿದೆ, ಎಷ್ಟೋ ರೀತಿಯ ಪ್ರಸಾದಗಳನ್ನು ಮಾಡಿ ಬಡಿಸಿದೆ" ಎಂದು ತೃಪ್ತಿಪಡುತ್ತಾರೆ. ಇನ್ನೂ ಕೆಲವರು ತೀರ್ಥಯಾತ್ರೆಗಳಿಗೆ ಹೋಗುತ್ತಾರೆ. ಅಲ್ಲಿ ದೇವರ ದರ್ಶನ ಚೆನ್ನಾಗಿ ಆಯಿತು, ಶಿಫಾರಸು ಪತ್ರದೊಂದಿಗೆ (Recommendation Letter) ಹೋಗಿ ಅಭಿಷೇಕ, ಪೂಜೆಗಳನ್ನು ಮಾಡಿಸಿದೆವು, ದೇವರನ್ನು ಹತ್ತಿರದಿಂದ ಚೆನ್ನಾಗಿ ನೋಡಿದೆವು ಎಂದು ಹೇಳಿಕೊಳ್ಳುತ್ತಿರುತ್ತಾರೆ.

ಇನ್ನೂ ಕೆಲವರು ಹಿಮಾಲಯಕ್ಕೆ ಹೋಗುತ್ತಾರೆ, ಅಲ್ಲಿ ನಡೆಯಲು ಸಾಧ್ಯವಾಗದೆ ಡೋಲಿಗಳಲ್ಲಿ ಕುಳಿತು ಇತರರಿಂದ ಹೊರಿಸಿಕೊಂಡು ಹೋಗಿ, ಅಲ್ಲಿನ ದೇವರನ್ನು ದರ್ಶನ ಮಾಡಿ "ದರ್ಶನ ಚೆನ್ನಾಗಿ ಆಯಿತು" ಎಂದು ತೃಪ್ತಿಪಡುತ್ತಾರೆ. ಇಂತಹವರೆಲ್ಲರೂ ರಜೋ ಗುಣದಲ್ಲಿ ಇರುವವರು, ಇವರು ಬಾಹ್ಯ ಆಕರ್ಷಣೆಯನ್ನು ನೋಡಿ ಸಂತೋಷಪಡುತ್ತಾರೆ.

ಯಾರು ಸಾತ್ವಿಕ ಗುಣಕ್ಕೆ ಬರುತ್ತಾರೋ, ಅವರು ಬಾಹ್ಯ ಆಕರ್ಷಣೆಗಿಂತ ಅಂತರಂಗದ ಆಕರ್ಷಣೆಯು ಇನ್ನೂ ಮಿಗಿಲಾದುದು ಎಂದು ತಿಳಿದುಕೊಳ್ಳುತ್ತಾರೆ. ಇವರೆಲ್ಲರೂ ಅಜ್ಞಾನದ ದೆಸೆಯಿಂದ ಜ್ಞಾನದ ದೆಸೆಗೆ ಬಂದವರು. ಇಂತಹವರಿಗೆ ಅಂತರಂಗದ ಕರೆ ಕೇಳಿಸುತ್ತದೆ. ಬಾಹ್ಯ ಆಕರ್ಷಣೆಯಲ್ಲಿ ಇರುವವರಿಗೆ ಅಂತರಂಗದ ಕರೆ ಕೇಳಿಸುವುದಿಲ್ಲ. ಬಾಹ್ಯಕ್ಕಿಂತ ಅಂತರಂಗದಲ್ಲಿ ಏನೋ ಇದೆ ಎಂದು ತಿಳಿದುಕೊಳ್ಳಲು ಬಯಸುವವರು ಸಾತ್ವಿಕ ಗುಣಕ್ಕೆ ಬಂದಂತೆಯೇ; ಸಾತ್ವಿಕ ಗುಣವೇ ಸತ್ಯಕ್ಕೆ ಹತ್ತಿರವಾಗಿಸುತ್ತದೆ.

ಅದಕ್ಕಾಗಿಯೇ, ಈ ಮಾರ್ಗಕ್ಕೆ ಬನ್ನಿ ಎಂದು ಎಷ್ಟು ಹೇಳಿದರೂ ಅವರು ಬಾರದಿರಲು ಕಾರಣ ಅವರ ಗುಣಗಳು. ತಮೋ ಗುಣ ಮತ್ತು ರಜೋ ಗುಣ ಹೊಂದಿರುವವರಿಗೆ ನೀವು ಎಷ್ಟು ಹೇಳಿದರೂ ಸತ್ಯವನ್ನು ತಿಳಿದುಕೊಳ್ಳಲಾರರು. ಯಾರು ಸಾತ್ವಿಕ ಗುಣಕ್ಕೆ ಬರುತ್ತಾರೋ, ಅವರು ಮಾತ್ರ ಸತ್ಯವನ್ನು ಅರಿಯಬಲ್ಲರು.

ಅಂತರಂಗದ ಪ್ರಪಂಚದಲ್ಲಿ ಆನಂದವೇ ಇಲ್ಲದಿದ್ದರೆ ಯೋಗಿಗಳು, ಋಷಿಗಳು ಮತ್ತು ಮುನಿಗಳು ಏಕೆ ಯಾವಾಗಲೂ ಧ್ಯಾನದಲ್ಲಿ ಇರುತ್ತಾರೆ? ಈ ಪ್ರಪಂಚದಲ್ಲಿ ಒಬ್ಬ ಕೋಟ್ಯಧಿಪತಿಯನ್ನು ನೋಡಿ "ಇವನು ಹೇಗೆ ಕೋಟ್ಯಧಿಪತಿಯಾದ?" ಎಂದು ಯೋಚಿಸುತ್ತಾರೆ. ಆದರೆ ಒಬ್ಬ ಯೋಗಿಯನ್ನು ನೋಡಿ "ಇವರು ಬಾಹ್ಯ ಆಕರ್ಷಣೆಗಳನ್ನೆಲ್ಲ ಬಿಟ್ಟು ಹೇಗೆ ಅಂತರ್ಮುಖಿಯಾದರು?" ಎಂದು ಯೋಚಿಸುವುದಿಲ್ಲ.

ಬಾಹ್ಯಕ್ಕಿಂತ ಅಂತರಂಗದಲ್ಲೇ ಹೆಚ್ಚಿನ ಆನಂದವಿದೆ ಎಂದು ಸಾತ್ವಿಕ ಗುಣದಲ್ಲಿ ಇರುವವರು ಮಾತ್ರ ಗ್ರಹಿಸಬಲ್ಲರು. ಅಂತಹವರಿಗೆ ಆ ಭಗವಂತನು ಕಷ್ಟಗಳನ್ನು ನೀಡಿ ತನ್ನ ಕಡೆಗೆ ತಿರುಗಿಸಿಕೊಳ್ಳುತ್ತಾನೆ, ಕಷ್ಟಗಳನ್ನು ಕೊಟ್ಟು ತನ್ನ ಕಡೆಗೆ ತಿರುಗಿಸಿಕೊಳ್ಳುತ್ತಾನೆ ಅಂದರೆ ಆತ್ಮದ ಕಡೆಗೆ ತಿರುಗಿಸಿಕೊಳ್ಳುತ್ತಾನೆ.

ಇಂತಹವರು ಎಲ್ಲರ ಒಳಿತನ್ನು ಬಯಸುತ್ತಾರೆ, ಯಾರಿಗೂ ಕೇಡನ್ನು ಮಾಡುವುದಿಲ್ಲ, ಸೇವಾ ಮಾರ್ಗದಲ್ಲಿ ಇರುತ್ತಾರೆ. ಆದರೆ ಅವರಲ್ಲಿ ಇನ್ನೂ ಯಾವುದೋ ಅತೃಪ್ತಿ ಇರುತ್ತದೆ. ಅದಕ್ಕೆ ಕಾರಣವೇನು? ಎಂದು ಅವರಲ್ಲಿ ಅಂತರಂಗದ ಜಿಜ್ಞಾಸೆ ಉಂಟಾದಾಗ, ಆ ಪರಮಾತ್ಮನು ಅವರ ಜೀವನಕ್ಕೆ ಒಬ್ಬ ಸದ್ಗುರುವನ್ನು ಕಳುಹಿಸುತ್ತಾನೆ.

ಆ ಭಗವಂತನ ಕೃಪೆಯಿಂದಲೇ ಸದ್ಗುರುಗಳು ದೊರೆಯುತ್ತಾರೆ. ಈ ಆಧ್ಯಾತ್ಮಿಕ ಮಾರ್ಗದಲ್ಲಿ ಬೆಳೆಯಬೇಕೆಂದರೆ ಭಗವಂತನ ಕೃಪೆ ಮತ್ತು ಗುರುಕೃಪೆ ಇರಲೇಬೇಕು ಎಂದು ಶಂಕರಾಚಾರ್ಯರು ಹೇಳಿದ್ದಾರೆ.

ಬಾಹ್ಯವಾಗಿ ಏನೇ ಇದ್ದರೂ ತೃಪ್ತಿ ಇಲ್ಲದ ಮನುಷ್ಯರಿಗೆ, ಯಾವುದೋ ಒಂದು ಸಣ್ಣ ಕಷ್ಟ ಬಂದಾಗ ಹೀಗೆ ಅನಿಸುತ್ತದೆ: "ನಾನು ಇಷ್ಟು ದಿನ ಈ ಸಂಸಾರದಲ್ಲಿ ಎಷ್ಟೋ ಸುಳ್ಳುಗಳನ್ನು ಹೇಳಿದೆನು, ಎಷ್ಟೋ ಕರ್ಮಗಳನ್ನು ಮಾಡಿದೆನು. ಹಣ ಸಂಪಾದನೆಯೇ ಗುರಿ ಎಂದುಕೊಂಡೆನು, ಪದವಿಗಳನ್ನು ಪಡೆಯುವುದೇ ಜೀವನದ ಧ್ಯೇಯ ಎಂದುಕೊಂಡೆನು. ಇವುಗಳಲ್ಲೇ ಆನಂದವನ್ನು ಹುಡುಕಿದೆನು, ಆದರೆ ಅದು ಸಿಗಲಿಲ್ಲ."

ಆದರೆ, ಆನಂದವು ಆತ್ಮದಲ್ಲಿದೆ ಎಂದು ತಿಳಿದುಕೊಂಡಾಗ ಅತ್ಯಂತ ತೃಪ್ತಿಯಿಂದ ಬದುಕುತ್ತಾ, "ಈ ಬಾಹ್ಯ ಪ್ರಪಂಚದಲ್ಲೇ ಇಷ್ಟೊಂದು ಆನಂದವಿದ್ದರೆ, ಅಂತರಂಗಕ್ಕೆ ಹೋದರೆ ಇನ್ನು ಎಂತಹ ಆನಂದವಿರಬಹುದು!" ಎಂದು ಅಂತರ್ಮುಖಿಯಾಗುತ್ತಾನೆ.

ಅದಕ್ಕೇ ಭಗವಂತನು ದೊಡ್ಡವನು; ಆತನು ಎಲ್ಲವನ್ನೂ ಹೊರಗಿಟ್ಟು, ತಾನು ಮಾತ್ರ ಅಂತರಂಗದಲ್ಲಿ ಅಡಗಿಕೊಂಡಿದ್ದಾನೆ. ಈ ವಿಷಯವನ್ನು ಕೆಲವರು ಮಾತ್ರ ತಿಳಿದುಕೊಳ್ಳಬಲ್ಲರು. ಭಗವದ್ಗೀತೆಯಲ್ಲಿ ಕೂಡ ಕೃಷ್ಣ ಪರಮಾತ್ಮನು ಹೀಗೆ ಹೇಳಿದ್ದಾನೆ: "ಅನೇಕರು ಭಗವಂತನ ಬಗ್ಗೆ ತಿಳಿದುಕೊಳ್ಳುತ್ತಾರೆ, ಆದರೆ ನನ್ನ ತತ್ವವನ್ನು ತಿಳಿದು ನನ್ನನ್ನು ಸೇರುವವರು ಮಾತ್ರ ಅತಿ ವಿರಳ."

ಲೋಕವೆಲ್ಲಾ ಭಗವಂತನಿದ್ದಾನೆ ಎಂದು ಒಪ್ಪಿಕೊಂಡರೂ, ಆ ಭಗವಂತ ಎಲ್ಲಿದ್ದಾನೆ? ಆತನನ್ನು ತಲುಪುವುದು ಹೇಗೆ? ಎಂಬ ಪರಮ ಸತ್ಯವು ಕೆಲವರಿಗೆ ಮಾತ್ರ ತಿಳಿಯುತ್ತದೆ. ಭಗವಂತನನ್ನೇ ಕೋರಿದರೆ ಅಂತ್ಯವಿಲ್ಲದ ಆನಂದವನ್ನು ಅನುಭವಿಸುತ್ತಾರೆ. ಈ ಸೃಷ್ಟಿಯಲ್ಲಿ ಏನನ್ನು ಪಡೆದರೂ, ಭಗವಂತನನ್ನು ಕೋರಿದವನೇ ಆನಂದವಾಗಿ ಜೀವಿಸುತ್ತಾನೆ ಎಂದು ನಮ್ಮ ಸೊಸೈಟಿಯ (ಸಂಸ್ಥೆಯ) ರಾಘವರಾವ್ ಅವರ ಶಿಷ್ಯರಿಗೆ ಮಾತ್ರ ಗೊತ್ತು ಎಂದು ನಾನು ಬಹಳ ಹೆಮ್ಮೆಯಿಂದ ಹೇಳಬಲ್ಲೆ.

ಯಾಕೆಂದರೆ ನಮ್ಮ ಸೊಸೈಟಿಯಲ್ಲಿ ಎಲ್ಲರೂ ಕೂಡ ಸಂಕಲ್ಪಗಳನ್ನು ಮಾಡಿ, ಈ ಧ್ಯಾನ ಮಾಡಿ, ಆ ಧ್ಯಾನ ಮಾಡಿ ಎಂದು ಹೇಳುತ್ತಾರೆ. ಆದರೆ ಪತ್ರೀಜಿಯವರು ನೀನು ಆತ್ಮ ಎಂದು ತಿಳಿದುಕೊಳ್ಳಲು "ಶ್ವಾಸದ ಮೇಲೆ ಗಮನ" ಇಟ್ಟು ಧ್ಯಾನ ಮಾಡು ಎಂದು

ಎರಡೇ ಮಾತುಗಳಲ್ಲಿ ಹೇಳಿಬಿಟ್ಟರು. ನಿಮ್ಮಲ್ಲಿ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕೆಂದರೆ ಸರಿಯಾದ ಧ್ಯಾನ ಮಾಡಬೇಕು, ಸರಿಯಾದ ಧ್ಯಾನ ಮಾಡಿದರೆ ಮಾತ್ರ ಸರಿಯಾದ ಫಲಿತಾಂಶಗಳನ್ನು ಪಡೆಯುತ್ತೀರಿ.

ಪತ್ರೀಜಿಯವರು "ಶ್ವಾಸದ ಮೇಲೆ ಗಮನ" ಇಟ್ಟು ಧ್ಯಾನ ಮಾಡಿ ನಿಮ್ಮ ಅಂತರಂಗಕ್ಕೆ ಹೋಗಿ ಎಂದು ಹೇಳಿದರೆ, ಅದು ಅರ್ಥವಾಗದೆ ಅನೇಕರು ವಿವಿಧ ರೀತಿಯ ಧ್ಯಾನಗಳನ್ನು ಮಾಡಿ ಅಂತರಂಗವನ್ನು ಮುಚ್ಚಿಕೊಳ್ಳುತ್ತಿದ್ದಾರೆ. ಆ ಅಂತರಂಗದ ಮಥನವನ್ನು (ಧ್ವನಿಯನ್ನು) ಕೇಳಿಸಿಕೊಳ್ಳಲು ಅವರಿಗೆ ಸಾಧ್ಯವಾಗುತ್ತಿಲ್ಲ. ಏಕೆಂದರೆ ಅಂತಹ ಧ್ಯಾನಗಳಿಂದ ಅಂತರಂಗದ ಸಂಕೇತಗಳು ಮನಸ್ಸಿಗೆ ತಲುಪುವುದಿಲ್ಲ. ಮನಸ್ಸನ್ನು ಬಾಹ್ಯ ಪ್ರಪಂಚದ ಕಡೆಗೆ ತಿರುಗಿಸಿಟ್ಟರೆ ಅಂತರಂಗದ ಪ್ರಬೋಧನೆಗಳು ಕೇಳಿಸುವುದಿಲ್ಲ.

ಕೆಲವರು ಆರೋಗ್ಯಕ್ಕಾಗಿ ಮಾತ್ರ ಧ್ಯಾನ ಮಾಡುತ್ತಾರೆ. ದೇಹಕ್ಕಾಗಿ ಧ್ಯಾನ ಮಾಡುವುದು ಎಷ್ಟು ಹಾಸ್ಯಾಸ್ಪದ ಎಂಬುದು ನಿಮಗೆ ತಿಳಿಯಲಿ. ನಿಮ್ಮ ಶರೀರದ ಅನ್ನಮಯ ಕೋಶಕ್ಕೆ ಸರಿಯಾದ ಆಹಾರ ನೀಡಿದಾಗ ಮತ್ತು ಯಾವುದೇ ಕರ್ಮಗಳು ಇಲ್ಲದಿದ್ದಾಗ ನಿಮಗೆ ರೋಗವೇ ಬರುವುದಿಲ್ಲ. ನಿಮ್ಮ ಶರೀರವು ರೋಗಗ್ರಸ್ತವಾಗಿದೆ ಎಂದರೆ, ಸರಿಯಲ್ಲದ ಯಾವುದೋ ಆಹಾರ ಸೇವಿಸಿದ್ದೀರಿ ಅಥವಾ ಸರಿಯಲ್ಲದ ಯಾವುದೋ ಆಲೋಚನೆ ಮಾಡಿದ್ದೀರಿ ಎಂದು ವಿಚಾರಣೆಯ ಮೂಲಕ ತಿಳಿದುಕೊಳ್ಳಬೇಕು.

ಅಷ್ಟೇ ಹೊರತು ನಶಿಸಿಹೋಗುವ ಈ ಶರೀರಕ್ಕಾಗಿ, ಧ್ಯಾನದ ಮೂಲಕ ನೀವು ಪಡೆಯುವ ಆತ್ಮಶಕ್ತಿಯನ್ನು ಖರ್ಚು ಮಾಡಬಾರದು ಎಂದು ಜ್ಞಾನದ ಮೂಲಕ ತಿಳಿಯಬೇಕು. ಧ್ಯಾನ ಎಂಬುದು ಜ್ಞಾನಕ್ಕಾಗಿಯೇ ಎಂದು ಪ್ರತಿಯೊಬ್ಬರೂ ತಿಳಿದುಕೊಂಡರೆ ಆನಂದವಾಗಿ ಜೀವಿಸಬಲ್ಲರು. ಆನಂದ ಸ್ವರೂಪವಾದ ಆತ್ಮದ ಬಳಿಯೇ ಆನಂದವಿರುತ್ತದೆ, ಆದರೆ ಆ ಆನಂದ ಸ್ವರೂಪನು ಸೃಷ್ಟಿಸಿದ ಈ ಬ್ರಹ್ಮಾಂಡದಲ್ಲಿ ಸುಖ, ಸಂತೋಷಗಳು ಇರುತ್ತವೆ.

ಆದರೆ ಆನಂದವಿರುವುದಿಲ್ಲ. ಸುಖ–ಸಂತೋಷಗಳು ಶಾಶ್ವತವಲ್ಲ. ಅವು ಇಂದು ಇರಬಹುದು, ನಾಳೆ ಹೋಗಬಹುದು. ಆದರೆ ಆನಂದ ಎಂಬುದು ಶಾಶ್ವತ ಮತ್ತು ನಿರಂತರವಾಗಿರುತ್ತದೆ. ಆದ್ದರಿಂದ ಇರುವುದರಲ್ಲೇ ತೃಪ್ತಿ ಪಡುತ್ತಾ, ಧ್ಯಾನ ಮಾಡುತ್ತಾ ಆನಂದವಾಗಿ ಜೀವಿಸಬೇಕು. ಈ ಲೌಕಿಕ ಸುಖಗಳನ್ನು ಸಾಮಾನ್ಯವಾಗಿ ಭಾವಿಸಿ, ಆನಂದಕ್ಕಾಗಿ ಅನ್ವೇಷಿಸುವವನೇ ಮಹಾಯೋಗಿ.

ಬಾಹ್ಯ ಪ್ರಪಂಚದಲ್ಲಿ ಎಲ್ಲಾ ಸುಖಗಳನ್ನು ಅನುಭವಿಸಿದರೂ, ನಿನ್ನ ಅಂತರಂಗದಲ್ಲಿ ಶಾಶ್ವತವಾದ ಸುಖವಿದೆ ಎಂದು ತಿಳಿದುಕೊಂಡವನೇ ಶ್ರೇಷ್ಠನು. ಅದಕ್ಕಾಗಿಯೇ ಸಾತ್ವಿಕ ಗುಣ ಬರುವವರೆಗೂ ಅಂತರಂಗದ ಕರೆ ಕೇಳಿಸುವುದಿಲ್ಲ. ಅಂತರಂಗದ ಕರೆ ಸತ್ವಗುಣಕ್ಕೆ

ಬಂದವರಿಗೆ ಕೇಳಿಸುತ್ತದೆ. ಅಂದರೆ ತಮೋಗುಣ ಮತ್ತು ರಜೋಗುಣಗಳಲ್ಲಿ ಪಾಪಗಳು ಹೆಚ್ಚಾಗಿರುವುದರಿಂದ ಮತ್ತು ಕರ್ಮಗಳು ಹೆಚ್ಚಾಗಿರುವುದರಿಂದ ನಿನ್ನ ಮನಸ್ಸು ಮಲಿನವಾಗಿರುತ್ತದೆ, ಆದ್ದರಿಂದ ಅಂತರಂಗದ ಕರೆ ಕೇಳಿಸುವುದಿಲ್ಲ.

ಪಾಪ ಕರ್ಮಗಳನ್ನು ಮಾಡುವುದನ್ನು ಬಿಟ್ಟು, ಪುಣ್ಯ ಕರ್ಮಗಳನ್ನು ಸತ್ಕರ್ಮಗಳನ್ನಾಗಿ ಬದಲಾಯಿಸಿಕೊಳ್ಳುತ್ತಾ, ನಿಮ್ಮ ಕರ್ಮ ಫಲವನ್ನು ತ್ಯಜಿಸಿದಾಗ ನಿಮ್ಮ ಅಂತರಂಗದ ಕರೆ ನಿಮಗೆ ಕೇಳಿಸುತ್ತದೆ. ಅದಕ್ಕಾಗಿಯೇ ನೋಡಿ, ಈ ಧ್ಯಾನ ಮಾರ್ಗಕ್ಕೆ ಬಂದವರು ಒಂದು ವಾರಗಳ ಕಾಲ ಮನೆಯಲ್ಲಿ ಏನೋ ಕೆಲಸವಿದೆಯೆಂದು ಅಂದರೆ ಫಂಕ್ಷನ್ ಆಗಲಿ, ಮದುವೆಯಾಗಲಿ ಇದೆ ಎಂದು ಧ್ಯಾನ ಮಾಡದಿದ್ದರೆ, ನಿಮ್ಮ ಮನಸ್ಸಿನಲ್ಲಿ ಏನೋ ಕೊರತೆ, ಏನೋ ತಪ್ಪು ಮಾಡಿದ್ದೇನೆ ಎಂಬ ಭಾವನೆ ಇರುತ್ತದೆ. "ಇಂದು ಧ್ಯಾನ ಮಾಡಲಿಲ್ಲ, ಸ್ವಾಧ್ಯಾಯ ಮಾಡಲಿಲ್ಲ, ಈ ತಿಂಗಳು ನಾನು ಭೀಮವರಂ ಕ್ಲಾಸುಗಳಿಗೆ ಹೋಗಲಿಲ್ಲ" ಎಂದು ನೀವು ಅಂತರಂಗದಲ್ಲಿ ತಳಮಳ ಅನುಭವಿಸುತ್ತೀರಿ.

ಬಾಹ್ಯ ಸುಖಗಳ ಬಗ್ಗೆ ಬೇಸರಗೊಂಡು ವೈರಾಗ್ಯ ಹೊಂದಿದಾಗ, ಸತ್ವಗುಣಕ್ಕೆ ಬಂದು ತೃಪ್ತಿಯಿಂದ ಜೀವನ ನಡೆಸುತ್ತೀರಿ. ಉದಾಹರಣೆಗೆ, ನಿಮ್ಮ ಭೋಜನದಲ್ಲಿ ಅಂದು ಮಾಡಿದ ಪಲ್ಯ ನಿಮಗೆ ಇಷ್ಟವಾಯಿತು ಎಂದರೆ ಇನ್ನೊಂದು ಸೌಟು ಹಾಕಿಸಿಕೊಂಡು ತಿನ್ನುತ್ತೀರಿ, ಅಷ್ಟೇ ಹೊರತು ಪಾತ್ರೆಯಲ್ಲಿ ಇರುವುದೆಲ್ಲವನ್ನೂ ತಿಂದರೆ ನಿಮಗೆ ವಾಕರಿಕೆ ಬರುತ್ತದೆ. ಹಾಗೆಯೇ ಬಾಹ್ಯ ಸುಖಗಳನ್ನು ಎಷ್ಟು ಅನುಭವಿಸಿದರೂ ನಿಮ್ಮ ಮನಸ್ಸಿಗೆ ಪರಿಪೂರ್ಣ ತೃಪ್ತಿ ಸಿಗುವುದಿಲ್ಲ...

ಅಂತರಾಳದಲ್ಲಿ ನೀನು ಬಯಸಿದ್ದೆಲ್ಲವೂ ಇವೆ ಎಂದು ಆತ್ಮವು ಮನಸ್ಸಿಗೆ ಸಂಕೇತವನ್ನು ನೀಡುತ್ತದೆ. ಅದಕ್ಕಾಗಿಯೇ ನೋಡಿ, ಹೊರಗಿನ ಪ್ರಪಂಚದತ್ತ ತಿರುಗಿದ ಮನಸ್ಸು ನಮಗೆ ಶತ್ರುವಾಗುತ್ತದೆ, ಅದೇ ಅಂತರಾಳದತ್ತ ತಿರುಗಿದ ಮನಸ್ಸು ನಮಗೆ ಮಿತ್ರನಾಗುತ್ತದೆ. ಇವೆರಡಕ್ಕೂ ಕಾರಣ ಮನಸ್ಸೇ. ಆತ್ಮದಿಂದ ಬರುವ ಸಂಕೇತಗಳನ್ನು ನಿರ್ಲಕ್ಷಿಸುವುದು ಮನಸ್ಸೇ, ಆತ್ಮದ ಸಂಕೇತಗಳನ್ನು ಆಚರಿಸಿ ಅಂತರಾಳದತ್ತ ತಿರುಗುವುದು ಮನಸ್ಸೇ. ತಮೋಗುಣ ಮತ್ತು ರಜೋಗುಣಗಳಲ್ಲಿ ಕರ್ಮಗಳು ಹೆಚ್ಚಾಗಿರುವುದರಿಂದ ಅಂತರಾಳದ ಧ್ವನಿ ಕೇಳಿಸುವುದಿಲ್ಲ. ಪ್ರಪಂಚದ ಆಕರ್ಷಣೆ ಮತ್ತು ಇಂದ್ರಿಯ ಸುಖಗಳ ಮೇಲೆ ಆಸೆ ಇರುವವನಿಗೆ ಅಂತರಾಳದ ಕರೆ ಕೇಳಿಸದು. ಎಷ್ಟು ದಾನಗಳನ್ನು ಮಾಡಿದರೂ ತೃಪ್ತಿ ಇಲ್ಲದೆ, ಎಷ್ಟು ಪುಣ್ಯ ಕಾರ್ಯಗಳನ್ನು ಮಾಡಿದರೂ ತೃಪ್ತಿ ಇಲ್ಲದೆ, ಸುಖ-ಭೋಗಗಳನ್ನು ಅನುಭವಿಸಿದರೂ ತೃಪ್ತಿ ಸಿಗದೆ "ಇನ್ನೂ ಯಾವುದೋ ಇದೆ ನಾನು ಮಾಡಬೇಕಾದದ್ದು, ನಾನು ತಿಳಿದುಕೊಳ್ಳಬೇಕಾದದ್ದು" ಎಂದು ಸತ್ವಗುಣಕ್ಕೆ ಬಂದವರಿಗೆ ಮಾತ್ರ ತಿಳಿಯುತ್ತದೆ.

ಈ ವಿಷಯಗಳನ್ನೆಲ್ಲ ನಾನು ರಾಘವ ರಾವ್ ಅವರಲ್ಲಿ ನೋಡಿದ್ದೇನೆ. ಯಾವಾಗಲೂ ಅವರ ದೃಷ್ಟಿ ಪರಸೇವೆಯ ಮೇಲೆಯೇ ಇರುತ್ತಿತ್ತು. ಅವರ ಬಳಿ ಇದ್ದ ಹಣವನ್ನು ದಾನಗಳಿಗೆ, ಪುಣ್ಯ ಕಾರ್ಯಕ್ರಮಗಳಿಗೆ ಖರ್ಚು ಮಾಡುತ್ತಿದ್ದರು. ಹಾಗೆ ಮಾಡುತ್ತಿದ್ದರೂ ಸಹ ಅವುಗಳಲ್ಲಿ ತೃಪ್ತಿ ಸಿಗದೆ "ನನಗೆ ಇನ್ನೂ ಏನೋ ಬೇಕು" ಎಂದು ತಪಿಸುತ್ತಿದ್ದರು. ಪತ್ರಿಜೀ ಅವರ ಪರಿಚಯದ ನಂತರ ತಾವು ಬಯಸಿದ ಜೀವನ ತಮಗೆ ದೊರೆಯಿತು ಎಂದು ತೃಪ್ತಿಪಟ್ಟರು. ಈ 77 ವರ್ಷಗಳ ವಯಸ್ಸಿನಲ್ಲೂ ನಿರಂತರವಾಗಿ ತಿರುಗುತ್ತಿದ್ದಾರೆಂದರೆ ಅವರಿಗೆ ಧ್ಯಾನದ ಮೇಲೆ, ಜ್ಞಾನದ ಮೇಲೆ, ಭಗವಂತನ ಮೇಲೆ ಎಂತಹ ಪ್ರೀತಿ ಇದೆಯೆಂದು ಅವರ ದೈನಂದಿನ ಜೀವನವನ್ನು ನೋಡುವವರಿಗೆ ಅರ್ಥವಾಗುತ್ತದೆ.

ನಮ್ಮ ಮನಸ್ಸಿನ ಗುಣಗಳ ಆಧಾರದ ಮೇಲೆಯೇ ನಮ್ಮ ಪ್ರವರ್ತನೆ ಇರುತ್ತದೆ ಎಂದು ಎಷ್ಟೋ ತರಗತಿಗಳಲ್ಲಿ ಹೇಳಿಕೊಂಡಿದ್ದೇವೆ. ನಿಮ್ಮ ಮನಸ್ಸು ರಜೋಗುಣಕ್ಕೆ ಹೋದಾಗ ಮೊದಲ ಮೆಟ್ಟಿಲಾಗಿ ಪುಣ್ಯ ಕಾರ್ಯಗಳನ್ನು ಮಾಡುತ್ತೀರಿ, ಎರಡನೇ ಮೆಟ್ಟಿಲಾಗಿ ಸತ್ಕರ್ಮಗಳನ್ನು ಮಾಡುತ್ತೀರಿ, ಮೂರನೇ ಮೆಟ್ಟಿಲಾಗಿ ಧ್ಯಾನಕ್ಕೆ ಹೋಗುತ್ತೀರಿ. ನಿಮ್ಮ ಆತ್ಮವೇ ನಿಮ್ಮನ್ನು ಮತ್ತು ನಿಮ್ಮ ಮನಸ್ಸನ್ನು ಮುನ್ನಡೆಸುತ್ತಿರುತ್ತದೆ.

ಗುಣವಂತ ಮಹಾತ್ಮರಿಗೆ ಭಗವಂತನಿಂದಲೇ ಕರೆ ಬರುತ್ತದೆ. ಆ ಕರೆ ಎಂದರೆ ಅಂತರಂಗದ ಕಡೆಗೆ ತಿರುಗುವ ಒಂದು ಕರೆ; ಆಗಲೇ ಅವರು ತಮ್ಮ ಬಾಹ್ಯ ದೃಷ್ಟಿಯನ್ನು ಅಂತರ್ ದೃಷ್ಟಿಯಾಗಿ ಬದಲಾಯಿಸಿಕೊಳ್ಳುತ್ತಾರೆ.

ನಿಮ್ಮ ದೃಷ್ಟಿ ಬಾಹ್ಯ ದೃಷ್ಟಿಯಾದಾಗ ಪ್ರತಿಯೊಂದೂ ಕಷ್ಟವೆಂದು ಅನಿಸುತ್ತದೆ. ಅದೇ ನಿಮ್ಮ ಬಾಹ್ಯ ದೃಷ್ಟಿಯು ಅಂತರ್ ದೃಷ್ಟಿಯಾದಾಗ, ಎಷ್ಟೇ ಕಷ್ಟಗಳು ಬಂದರೂ 'ಕರ್ಮ ಕಳೆಯುತ್ತಿದೆ' ಎಂಬ ತೃಪ್ತಿಯೊಂದಿಗೆ ಪ್ರತಿಯೊಂದನ್ನೂ ಅಂಗೀಕರಿಸುತ್ತೀರಿ.

ನಿಮ್ಮ ಜೀವನದಲ್ಲಿ ಏನೇ ಸಂಭವಿಸಿದರೂ ಅದನ್ನು ಸ್ವೀಕರಿಸುವುದನ್ನು (Accept) ರೂಢಿಸಿಕೊಳ್ಳುತ್ತೀರಿ. ಏಕೆಂದರೆ ಭಗವಂತನಿಗೆ ತಿಳಿಯದೇ ಅಥವಾ ಆತ ನಿರ್ಧರಿಸದೇ ಈ ಭೂಮಿಯ ಮೇಲೆ ಯಾವುದೂ ನಡೆಯುವುದಿಲ್ಲ. ಇಂದು ನಮಗೆ ಕಷ್ಟ ಬಂದಿದೆ ಎಂದರೆ ಅದರ ಹಿಂದೆ ಯಾವುದೋ ಒಂದು ಕರ್ಮವಿದೆ. ಪಾಪ ಕರ್ಮವಿಲ್ಲದೆ ಕಷ್ಟ ಬರುವುದಿಲ್ಲ, ಪುಣ್ಯ ಕರ್ಮವಿಲ್ಲದೆ ಭೋಗ ಭಾಗ್ಯಗಳು ಸಿಗುವುದಿಲ್ಲ ಎಂದು ತಿಳಿದುಕೊಂಡು, ಯಾವುದೇ ಕಷ್ಟ ಬಂದರೂ ದುಃಖ ಪಡದೆ 'ಕರ್ಮ ಕಳೆಯಿತು' ಎಂದು ತೃಪ್ತಿಯಿಂದ ಬದುಕಬಲ್ಲವನೇ ನಿಜವಾದ ಆಧ್ಯಾತ್ಮಿಕವಾದಿ.

ಬಾಹ್ಯ ಜೀವನದ ಮೇಲಿನ ಜಿಗುಪ್ಸೆಯೇ ಆಧ್ಯಾತ್ಮಿಕ ಜೀವನಕ್ಕೆ ಬುನಾದಿ. ಬಾಹ್ಯ ಜೀವನದಲ್ಲಿ ಆನಂದವಿಲ್ಲ, ನಿಜವಾದ ಆನಂದವು ಅಂತರಂಗದಲ್ಲೇ ಇದೆ

ಎಂದು ತಿಳಿದುಕೊಂಡು, ಬಾಹ್ಯವನ್ನು ಬಿಟ್ಟು ಅಂತರಂಗದೊಳಗೆ ಹೋಗಬೇಕು. ಈ ವಿಷಯವನ್ನು ತಿಳಿದವರು ಒಂದು ಕ್ಷಣವನ್ನೂ ವ್ಯರ್ಥ ಮಾಡದೆ, ಬಿಡುವಿನ ವೇಳೆಯಲ್ಲೆಲ್ಲಾ ಧ್ಯಾನ ಮಾಡುತ್ತಾರೆ. ಈ ಮಾರ್ಗಕ್ಕೆ ಬಂದ ನೀವೆಲ್ಲರೂ ತೃಪ್ತಿಕರವಾದ ಜೀವನವನ್ನು ನಡೆಸುತ್ತಾ, ಎಂತಹ ಕಷ್ಟ ಬಂದರೂ ಅದು 'ನನ್ನ ಕರ್ಮದ ಫಲವೇ' ಎಂದು ತಿಳಿದುಕೊಂಡಿದ್ದೀರಿ, ಹಾಗಾಗಿಯೇ ನೀವು ಸಾಧನೆ ಮಾಡಲು ಸಾಧ್ಯವಾಗುತ್ತಿದೆ. ಸಾತ್ವಿಕ ಗುಣದಲ್ಲಿರುವ ನೀವು ಆಗಿಂದಾಗ್ಗೆ ವಿಚಾರಣೆ (ಆತ್ಮಾವಲೋಕನ) ಮಾಡಿಕೊಳ್ಳುತ್ತಾ, 'ಮತ್ತೆ ನಾವು ತಮೋ ಗುಣಕ್ಕೋ ಅಥವಾ ರಜೋ ಗುಣಕ್ಕೋ ಜಾರಿ ಹೋಗುತ್ತಿದ್ದೇವೆಯೇ? ನಮಗೆ ಆಸೆಗಳು ಬರುತ್ತಿವೆಯೇ?' ಎಂದು ಅಲ್ಲಲ್ಲಿಯೇ ಪರೀಕ್ಷಿಸಿಕೊಳ್ಳುತ್ತಾ ನಿಮ್ಮ ಸಾಧನೆಯಲ್ಲಿ ಪ್ರಗತಿ ಸಾಧಿಸಬೇಕು.

"ಅದಕ್ಕಾಗಿಯೇ ಸಾತ್ವಿಕ ಗುಣಕ್ಕೆ ಬಂದಿರುವ ನೀವು ಸಾಧನೆ ಮಾಡುತ್ತಾ..." ಎಂದೆಂದಿಗೂ ನಿಮ್ಮ ಗುಣಗಳು ಹಿಂದಕ್ಕೆ ಹೋಗದಂತೆ ನೋಡಿಕೊಳ್ಳುತ್ತಾ, ಮನಸ್ಸನ್ನು ಶುದ್ಧವಾಗಿರಿಸಿಕೊಂಡರೆ ಅಂತರಂಗದ ಕರೆ ನಿಮಗೆ ಕೇಳಿಸುತ್ತದೆ. ನಿಮ್ಮ ಮನಸ್ಸನ್ನು ಶುದ್ಧವಾಗಿ ಇಟ್ಟುಕೊಂಡರೆ ನಿಮಗೆ ಎರಡು ಲಾಭಗಳಿರುತ್ತವೆ.

1) ಪುಣ್ಯ ಕರ್ಮಗಳು, ಪಾಪ ಕರ್ಮಗಳನ್ನು ಮಾಡುವುದಿಲ್ಲ.

2) ಆತ್ಮ ಕರ್ಮಗಳನ್ನೇ ಮಾಡುತ್ತಾ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾ ಮೋಕ್ಷದತ್ತ ಪಯಣಿಸುತ್ತೀರಿ.

ಅದಕ್ಕಾಗಿಯೇ ಪ್ರತಿಯೊಬ್ಬ ವ್ಯಕ್ತಿಯೂ ಮೊದಲು ಮನಸ್ಸನ್ನು ಸತ್ವಗುಣದಲ್ಲಿ ಇಟ್ಟುಕೊಳ್ಳಬೇಕು, ಪವಿತ್ರವಾಗಿರಬೇಕು. 'ಈ ದಿನ ನಾನು ಏನಾದರೂ ತಪ್ಪು ಮಾಡಿದ್ದೇನಾ? ಯಾರನ್ನಾದರೂ ನೋಯಿಸಿದ್ದೇನಾ? ಏನಾದರೂ ಸುಳ್ಳು ಹೇಳಿದ್ದೇನಾ?' ಎಂದು ಪ್ರತಿದಿನ ಪರಿಶೀಲಿಸಿಕೊಳ್ಳಬೇಕು. ನಿಮ್ಮ ಆಲೋಚನೆ, ನಿಮ್ಮ ಮಾತು, ನಿಮ್ಮ ಕೆಲಸ ಈ ಮೂರೂ ಕೂಡ ಸರಿಯಾಗಿರಬೇಕು. ಅಂದರೆ ತ್ರಿಕರಣ ಶುದ್ಧಿಯಿಂದ ಇರಬೇಕು.

ನಿಮ್ಮ ಮಾತಿನ ಮೂಲಕ ಆಲೋಚನೆಗಳು ಒಂದಾದಾಗ ನಿಮ್ಮ ಮನಸ್ಸು ದೂರವಿರುತ್ತದೆ, ಆಗ ನೀವು ಆತ್ಮಕ್ಕೆ ಹತ್ತಿರವಾಗುತ್ತೀರಿ. ಸಾಧನೆ ಮಾಡುವುದು ಎಂದರೆ ಆತ್ಮಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು. ಆಲೋಚನೆಗಳಿಂದ ಆತ್ಮಶಕ್ತಿಯನ್ನು ವ್ಯಯ ಮಾಡಿ ಭಿಕ್ಷುಕನಂತೆ ಉಳಿಯದೆ, ವ್ಯರ್ಥ ಆಲೋಚನೆಗಳನ್ನು ಮಾಡದೆ ಸಾಧನೆ ಮಾಡಿ ಮೋಕ್ಷವನ್ನು ಪಡೆಯಬೇಕು. ಆದ್ದರಿಂದ ನೀವೆಲ್ಲರೂ ಕೂಡ ಸಾಧನೆ ಮಾಡಿ ನಿಮ್ಮ ಬಾಹ್ಯ ದೃಷ್ಟಿಯನ್ನು ಅಂತರ್ ದೃಷ್ಟಿಯಾಗಿ ಬದಲಾಯಿಸಿಕೊಂಡು, ಅಂತರಂಗದ ಕರೆಯನ್ನು ಕೇಳುವ ಶಕ್ತಿಯನ್ನು ಧ್ಯಾನದ ಮೂಲಕ ಪಡೆದುಕೊಳ್ಳಿ.

ಬ್ರಹ್ಮರ್ಷಿ ಪಿತಾಮಹ ಡಾ. ಸುಭಾಷ್ ಪತ್ರೀಜಿಯವರ
ಆಶೀರ್ವಾದಗಳೊಂದಿಗೆ

"ಧ್ಯಾನವೆಂದರೆ ಶ್ವಾಸದ ಮೇಲೆ ಗಮನ"

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್ ಹಾಗೂ ಬ್ರಹ್ಮವಿದ್ವರಿಷ್ಠ ರಾಜ್ಯಲಕ್ಷ್ಮೀ ಅಮ್ಮನವವರು (ಭೀಮಾವರಂ ಎ.ಪಿ.) ನೇತೃತ್ವದಲ್ಲಿ ಧಾರವಾಡದಲ್ಲಿ ಪ್ರತಿ ತಿಂಗಳು 7, 8, 9 ರಂದು ಮೂರು ದಿನಗಳ ನಿಶ್ಯಬ್ಧ ಧ್ಯಾನ ಹಾಗೂ ಆತ್ಮಜ್ಞಾನ ಯಜ್ಞ ನಡೆಯಲಿದೆ.

ವಿಳಾಸ:

ಅಕ್ಕಮಹಾದೇವಿ ಆಶ್ರಮ, ಗಣೇಶ ನಗರ, ರೈಲ್ವೇ ಟ್ರ್ಯಾಕ್ ಹತ್ತಿರ
ಹಳಿಯಾಳ ರೋಡ್, ಧಾರವಾಡ
ಉಚಿತ ವಸತಿ ಹಾಗೂ ಅನ್ನಪ್ರಸಾದದ ವ್ಯವಸ್ಥೆ ಇರುತ್ತದೆ.
ರಿಜಿಸ್ಟ್ರೇಷನ್ ಕಡ್ಡಾಯ
----- ವಿವರಗಳಿಗಾಗಿ ಸಂಪರ್ಕಿಸಿ -----
ಸಾಯಿಲೀಲಾ (ಪಿರಮಿಡ್ ಮಾಸ್ಟರ್) ಮೊ: 63092 47146



ಬ್ರಹ್ಮರ್ಷಿ ಪಿತಾಮಹ ಡಾ. ಸುಭಾಷ್ ಪತ್ರೀಜಿಯವರ
ಆಶೀರ್ವಾದಗಳೊಂದಿಗೆ

ಶ್ರೀ ರಾಮಧಾಮ ಧ್ಯಾನ ಮಂದಿರ

ನಾರಾಯಣಪ್ಪ ಗಾರ್ಡನ್, ವೈಟ್‌ಫೀಲ್ಡ್ ಬೆಂಗಳೂರಿನಲ್ಲಿ ಪ್ರತಿ ಸೋಮವಾರ ಸಂಜೆ 5.30 ರಿಂದ 8.30ರ ವರೆಗೆ ಧ್ಯಾನ ಇರುತ್ತದೆ. ಪ್ರತಿ ಹುಣ್ಣಿಮೆ ಹಾಗೂ ಅಮಾವಾಸ್ಯೆ ದಿನದಂದು ವಿಶೇಷ ಧ್ಯಾನ ಶಿಬಿರ ನಡೆಸಲಾಗುತ್ತದೆ. ಪ್ರತಿ ಮೂರು ತಿಂಗಳಿಗೊಮ್ಮೆ ಮೂರು ದಿನ ಧ್ಯಾನ ಮತ್ತು ಆತ್ಮಜ್ಞಾನ ಯಜ್ಞ ಉಚಿತವಾಗಿ ನಡೆಯುತ್ತದೆ. ಈ ಕುರಿತು ಪಿಎಂಸಿ ಕನ್ನಡ ಚಾನಲ್ ಹಾಗೂ ಧ್ಯಾನ ಕಸ್ತೂರಿ ಮಾಸ ಪತ್ರಿಕೆಯಲ್ಲಿ ಮಾಹಿತಿ ಪ್ರಕಟಿಸಲಾಗುತ್ತದೆ.

--- ವಿವರಗಳಿಗಾಗಿ ಸಂಪರ್ಕಿಸಿ ---
ಹೆಚ್. ಎನ್. ಶ್ರೀನಿವಾಸ ಮೊ. 94496 95503
ವಿಜಯಲಕ್ಷ್ಮೀ ಎಸ್. ಎನ್. ಮೊ. 80500 82689

ಮನಸ್ಸಿನ ಸ್ಥಿತಿಗಳು

ಮಾನವನ ಪ್ರಗತಿಯು ಮನಸ್ಸಿನ ಮೇಲೆ ಅವಲಂಬಿತವಾಗಿದೆ. ಮನಸ್ಸು ಪ್ರಪಂಚದ ಕಡೆಗೆ ತಿರುಗಿದರೆ ಪ್ರಗತಿಯು ಮಂದಗತಿಯಲ್ಲಿರುತ್ತದೆ. ಅದೇ ಮನಸ್ಸು ಆತ್ಮದ ಕಡೆಗೆ ತಿರುಗಿದರೆ ಪ್ರಗತಿಯು ಅಧಿಕವಾಗಿರುತ್ತದೆ. ಮಾನವನ ಮನಸ್ಸು 'ಪಂಚಾವಸ್ಥೆಗಳಲ್ಲಿ' (ಐದು ಸ್ಥಿತಿಗಳಲ್ಲಿ) ಇರುತ್ತದೆ. ಅವುಗಳೆಂದರೆ:

- ಸ್ಮೃತಿ (ನೆನಪು)
- ಮತಿ (ತಿಳಿವಳಿಕೆ)
- ಬುದ್ಧಿ
- ಪ್ರಜ್ಞೆ
- ಪ್ರತಿಭೆ

ನಮ್ಮ ಮನಸ್ಸು ಈ ಪಂಚಾವಸ್ಥೆಗಳಲ್ಲಿದ್ದಾಗ, ಮೊದಲಿಗೆ ನಾವು ನಮಗಾಗಿ ಬದುಕುತ್ತಿದ್ದೇವೆ ಎಂದು ಭಾವಿಸುತ್ತೇವೆ. ಆದರೆ ಅಂತಿಮವಾಗಿ, ಈ ದೇಹವನ್ನು ಪಡೆದಿರುವುದು ಎಲ್ಲರಿಗಾಗಿಯೇ ಎಂಬ ಸತ್ಯ ನಮಗೆ ಅರ್ಥವಾಗುತ್ತದೆ. ಹಾಗೆ ಅರ್ಥವಾದಾಗಲೇ ಆನಂದಮಯವಾದ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ. ನಿಮ್ಮ ಮನಸ್ಸು ಅಂತರಾಳಕ್ಕೆ ಇಳಿದಾಗ ಅದು ವಿಶಾಲತೆಯನ್ನು ಪಡೆಯುತ್ತದೆ. ಅಂದರೆ ಎಲ್ಲರಿಗೂ ಸಹಾಯ ಮಾಡಬೇಕು, ಎಲ್ಲರನ್ನೂ ಜ್ಞಾನವಂತರನ್ನಾಗಿ ಮಾಡಬೇಕು ಎಂಬ ಹಂಬಲವಿರುವ ಮನಸ್ಸು ಅತ್ಯಂತ ಶ್ರೇಷ್ಠವಾದುದು. ಅಂತಹ ಮನಸ್ಥಿತಿಯನ್ನು ಬೆಳೆಸಿಕೊಳ್ಳುತ್ತಾ, "ಎಲ್ಲರೂ ಸುಖವಾಗಿರಲಿ" ಎಂಬ ಆಶಯ ಪ್ರತಿಯೊಬ್ಬರಲ್ಲೂ ಇರಬೇಕು.

– ಬ್ರಹ್ಮವಿದ್ವರಿಷ್ಠ ತಟವರ್ತಿ ರಾಜ್ಯಲಕ್ಷ್ಮಿ

ರೂ. 40/-

ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ
ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂಪರ್ಕಿಸಿ
http: //www.youtube.com/pmckannada
● www.meditationeverywhere.org
● www.pssmovement.org

ಶ್ರೀರಾಮ ಪಬ್ಲಿಕೇಶನ್ಸ್
ಶ್ರೀ ರಾಮಧಾಮ ಧ್ಯಾನ ಮಂದಿರ, ನಾರಾಯಣಪ್ಪ ಗಾರ್ಡನ್
ವೈಟ್‌ಫೀಲ್ಡ್ ಬೆಂಗಳೂರು–560 066
ಸಂಪರ್ಕಿಸಿ: ಹೆಚ್.ಎನ್. ಶ್ರೀನಿವಾಸ ಮೊ. 9449695503
ವಿಜಯಲಕ್ಷ್ಮೀ ಎಸ್.ಎನ್. ಮೊ. 8050082689

ತಟವರ್ತಿ ವೀರರಾಘವರಾವ್, ರಾಜ್ಯಲಕ್ಷ್ಮೀ ಅವರ ಪುಸ್ತಕಗಳು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಈ QR Codeನ್ನು Google Lensನಲ್ಲಿ ಸ್ಕ್ಯಾನ್ ಮಾಡಿರಿ

Telugu Books | English Books | Hindi Books | Kannada Books | Tamil Books